Azim Premji Foundation

ಬಯಲು Bayalu

....a space of our own

Karnataka Field Institutes July 2014 Issue No.: 23

1. The first letter from my son to his father

- **Akkamahadevi**



Date :- 18-6-14

My dear father,

I am fine here, I hope youare also fine over their, by gods grace. This letter is to inform or wish you a "Happy fathers day". It would be my pleasure to wish you. I think I am a luckiest person in world to earn you as my father.

"Happy father's day". It's my grace of previous birth to have you as my father. I can understand each and everything about you. You taught me how to ride bycycle and etc.

I thank you for everything. I will promise you I will fulfill your dreams and aims. I miss you a lot. Once again "Happy fathers day"

Yours loving
Son
Sangareddy
pati

I still remember the days when I was taught my son A,B,C,D. I beat him and forced him to learn. He involved himself without resisting me and tolerated all my punishment silently. When once he completed his home-work I used to feel so guilty for myself and asked him "Chinna is it paining? I am so bad you know, I treated you very badly, do you hate me for all these pain?" I was moved by his response! He told me "no mummy since I am not studying properly that's why you beat me otherwise you are really good"

Now he is in the 9th standard, but for me he is still a small child only. I realised my mistakes about corporal punishment. Later my husband started scolding him and forced him to read and write. He did not even allow him to watch TV and always forced him to eat food which he is not very fond of.

This affected my son and he started showing signs of anger on his father and kept avoiding him. This also impacted on his studies and he showed no interest in his studies. This made us to think about his future and both of us planned to put him in a residential school for some time. When I asked my son about his willingness to stay away from home, he was happy and agreed to go out.

This was evidence for us to understand he wished to stay away from home. We also looked at the other side of his desire and we were sure that he wouldn't become home-sick. We left him outside residential school from 7th standard and he is studying very well.

June 27th, we received a letter from him. I was away from home and my husband received this letter. He felt very happy and he called me immediately and told about this letter. I was filled with curiosity and soon as I returned I read his first letter. I was in tears. I was moved by his letter. We both forced, punished, scolded, all just for his studies. We failed to understand his feelings, emotions and desires all towards us. He loved us so much and he sounded so responsible.

Then both of us realised that this internal love and desire for family members would be the biggest gift one can have which is irreplaceable. He simply forgot the scolding he got from his father and made us realise the true spirit of love for our kids. Then we both discussed and learnt that we should trust our children and also understand their real craving feelings.

I felt that my son's feeing of real love is a big treasure for both of us. Now I wish my husband and my son both become best friends and understand each other's true self.

I am happy to share with you all the letter I read in tears many times written by my son to his father on FATHER'S day.

ಪರಿವಿಡಿ/Index

1. The first letter from my son to his father (English) ನನ್ನ ಮಗ ತನ್ನ ಅಪ್ಪನಿಗೆ ಬರೆದ ಮೊದಲ ಪತ್ರ by Akkamahadevi ……1
2. ಅಪ್ಪನ ಬಾಳ ದೋಣಿಯಲ್ಲಿ…(Kannada) My Father - His journey Udaya Bekal……4
3. Growing with my daughters (English) ನನ್ನ ಹೆಣ್ಣು ಮಕ್ಕಳ ಜೊತೆ ಬೆಳೆದಾಗ by Peri……5
4. ಓ ನನ್ನ ತಂದೆ! (Kanndada) Oh! My Father by Vaishali M Ani……6
5. Dad, you will always remain my number 1 ! (English) ಅಪ್ಪಾ, ನೀನು ಎಂದೂ ನನಗೆ ಮೊದಲಿಗನೆ! by Shruti……7
6. ತಂದೆಯೇ ಹೇಳಬೇಕಾದ ಸತ್ಯಗಳು (Kannada) Truth that father should reveal by Lakshmidevi……7
7. My Father… (English) ನನ್ನ ತಂದೆ by Randeep Kaur……9
8. ಜನುಮ ಜನುಮಕೂ…… (Kannada) Cherishable memorbles by Diwakara K……9
9. Father (English) ತಂದೆ by Y.J.Ravindraprakash……10
10. ಕಾಲ ಚಕ್ರದಲ್ಲಿ ಅಪ್ಪ ಬದಲಾದನೇ? (Kannada) Has father changed in time by Nageevi……11
11. Papa a girl's first hero (English) ಅಪ್ಪ, ಮಗಳ ಮೊದಲ ನಾಯಕ by Meera……13
12. ಅಪ್ರಾಯಮಾನವಾಗುವ ಈ ಅಪ್ಪಂದಿರು (Kannada) by K N Srilatha……14
13. ಅಪ್ಪಂದಿರ ದಿನ (Kannada) Father's day by Ramachandra Bhat……15
14. ಸ್ಪಂದನ (Kannada) Vibrate with reality by Showarish Kudukuli……15
15. ಇದು ಸೂಕ್ತವೇ……… (Kannada) by Gopalakrishna I……17
16. **ಎರಡು ತಲೆಯ ಬೆಕ್ಕು** (Kannada) Twin headed Cat by Ramakrishna……19
17. **ಬದ್ಧತೆ** (Kannada) Commitment by Ravi Prakash……21
18. Feedback……21
19. How do children learn! **(**Urdu)By Atiya Kousar……22
20. Cool clicks……23

2. ಅಪ್ಪನ ಬಾಳ ದೋಣಿಯಲ್ಲಿ.. My Father - His journey

– ಉದಯ ಬೇಕಲ್

ನನ್ನ ಅಪ್ಪ ಬದುಕಿದ ರೀತಿ ಅದ್ಭುತವಾಗಿತ್ತು. ಅವರು ಸುಮಾರು 32 ವರ್ಷಗಳ ಸರ್ಕಾರಿ ಸೇವೆಯಲ್ಲಿ ದುಡಿದಿದ್ದರು. 15 ವರ್ಷಗಳ ಕಾಲ ನಮ್ಮೂರಾದ ಕಾಸರಗೋಡಿನಲ್ಲಿ ತಹಶೀಲ್ದಾರರಾಗಿ ಕಾರ್ಯನಿರ್ವಹಿಸಿದ್ದರು. ಆ ಸಂದರ್ಭದಲ್ಲಿ ಕೇರಳ ಸರ್ಕಾರ ಜಾರಿಗೊಳಿಸಿದ ಭೂಸುಧಾರಣಾ ಕಾಯಿದೆಯನ್ನು ಸಮರ್ಪಕವಾಗಿ ನ್ಯಾಯಬದ್ಧತೆಯಿಂದ ಅನುಷ್ಠಾನಗೊಳಿಸಿದ್ದನ್ನು ನಾನು ಗಮನಿಸಿದ್ದೆ. ಭೂಮಿ ಇಲ್ಲದವರಿಗೆ ಭೂಮಿ ದೊರಕಿಸಿಕೊಡುವಲ್ಲಿ ಪರಿಣಾಮಕಾರಿಯಾಗಿ ಕಾಯ್ದೆಯ ಬಳಕೆ ಮಾಡಲು ಅವರಿಗೆ ಸಾಧ್ಯವಾಗಿತ್ತು. ಅಪ್ಪ ಸಂಪೂರ್ಣವಾಗಿ ತನ್ನನ್ನು ತಾನು ಕೆಲಸದಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ತಾವೇ ಆ ಕೆಲಸದ ಭಾಗವಾಗಿ ಹೋಗಿದ್ದರು. ಅವರ ದುಡಿಮೆಯ ಅನುಭವಗಳು ನಮ್ಮೆಲ್ಲರಿಗೂ ಅವಿಸ್ಮರಣೀಯ ಕ್ಷಣಗಳು. ನಿವೃತ್ತಿಯ ನಂತರವೂ ಸುಮಾರು 15 ವರ್ಷಗಳ ಕಾಲ ಖಾಸಗಿ ಕಂಪೆನಿಗಳಲ್ಲಿ ಕಾರ್ಯನಿರ್ವಹಿಸುತ್ತಾ, ಕುಟುಂಬ ಪೋಷಣೆ ಮಾಡಿರುವುದು ಅವರ ಕಾರ್ಯತತ್ಪರತೆ ಮತ್ತು ಸ್ವಾವಲಂಬಿ ಬದುಕಿಗೆ ಸಾಕ್ಷಿಯಾಗಿತ್ತು.

1925ರಲ್ಲಿ ಮಂಗಳೂರಿನಲ್ಲಿ ಹುಟ್ಟಿದ ನನ್ನ ತಂದೆಯವರು ಶಿಕ್ಷಣ ಪಡೆದದ್ದು ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ. ಅವರು ತಮ್ಮ ತಂದೆಯೊಂದಿಗೆ ಸೇರಿಕೊಂಡು ಸ್ವಾತಂತ್ರ್ಯ ಚಳುವಳಿಯನ್ನು ತೀರಾ ಹತ್ತಿರದಿಂದ ನೋಡಿದ್ದವರು. ನನ್ನ ಅಜ್ಜ ಬ್ರಿಟಿಷ್ ಪೋಲಿಸ್‌ನಲ್ಲಿ ಸೇವೆ ಸಲಿಸಿದ್ದರಿಂದಾಗಿ ಸ್ವಾತಂತ್ರ ಚಳುವಳಿಯ ಸೆಳೆತವಿದ್ದರೂ ನನ್ನ ಅಪ್ಪನಿಗೆ ಹತ್ತಿರ ಹೋಗಲು ಸಾಧ್ಯವಿರಲಿಲ್ಲವೆಂದು ಅಪ್ಪ ಆಗಾಗ ನೆನಪಿಸಿ ನಮಗೆ ಹೇಳುತ್ತಿದ್ದರು. ಮಂಗಳೂರಿನ ಸೇಂಟ್ ಅಲೋಷಿಯಸ್ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ಓದು ಮುಗಿಸಿ ಕಂದಾಯ ಇಲಾಖೆಯಲ್ಲಿ ಅಪ್ಪ ಸೇವೆಗೆ ಸೇರಿದ್ದರು. ತನ್ನ ಕೆಲಸದ ಬಗ್ಗೆ ನಿರಂತರ ಆತ್ಮತೃಪ್ತಿ ಅವರಲ್ಲಿತ್ತು. ತಾನು ನಂಬಿದ ಮೌಲ್ಯಗಳಿಗೆ ಬದ್ಧರಾಗಿದ್ದು, ಭ್ರಷ್ಟತೆಗೆ ಆಸ್ಪದವಿಲ್ಲದಂತೆ ನ್ಯಾಯಯುತವಾಗಿ ತಮ್ಮ ವೃತ್ತಿಧರ್ಮ ಪಾಲಿಸಿದ್ದರು.

ಹೀಗೆ ಮೌಲ್ಯಯುತ ಬದುಕು ಸಾಗಿಸಿದ ನನ್ನ ಅಪ್ಪ ಕಳೆದ ಏಪ್ರಿಲ್ 29ರಂದು ಮುಂಜಾನೆ ತಮ್ಮ ಬಾಳ ಪಯಣ ಮುಗಿಸಿದರು. ಅದರ ಹಿಂದಿನ ದಿನ ಸಂಜೆ ನಾನು ಗುಲ್ಬರ್ಗಾಕ್ಕೆ ಹೊರಡುವಾಗ "ಇನ್ನು ಯಾವಾಗ ಬರುತ್ತೀ ಮಗ"? ಎಂದು ಕೇಳಿದ್ದರು. ನಾನು ಬೇಗನೆ ಬರುತ್ತೇನೆ ಎಂದು ಹೇಳಿ ಹೊರಟ ನನಗೆ ಮರುದಿನ ಮುಂಜಾನೆ ಬಸ್ಸಿನಲ್ಲಿ ಮಂಗಳೂರು ಮಾರ್ಗವಾಗಿ ಬಿಜಾಪುರ ತಲುಪುತ್ತಿದ್ದಂತೆ ನನ್ನ ತಮ್ಮ ದೂರವಾಣಿ ಕರೆ ಮಾಡಿ 'ಅಪ್ಪ ಇನ್ನಿಲ್ಲ' ಎಂದು ಹೇಳಿದ.

ನನ್ನ ಅಪ್ಪ ನನಗೆ ಈಗ ನೆನಪಾಗುವುದು ನನ್ನ ಶಾಲಾ ದಿನಗಳಲ್ಲಿ ನನ್ನ ಪ್ರೋಗ್ರೆಸ್ ಕಾರ್ಡ್‌ಗೆ ಸಹಿ ಹಾಕುವಾಗ ಕೆಂಪು ಗೆರೆ ಕಂಡಲ್ಲಿ ಕೆಂಡಾಮಂಡಲವಾಗುತ್ತಿದ್ದರು. ಆದರೆ ನನ್ನ ಅಣ್ಣ ಚೆನ್ನಾಗಿ ಓದುತ್ತಿದ್ದರಿಂದ ನಾನು ಅದರಿಂದ ತಪ್ಪಿಸಿಕೊಳ್ಳುತ್ತಿದ್ದೆ. ತನ್ನ ಬದುಕಿಗಾಗಿ ತಾನೇ ಹಾಕಿಕೊಂಡ ನೀತಿಯ ಅಡಿಯಲ್ಲಿ ಜೀವನ ನಡೆಸಿ, ಮಕ್ಕಳಾದ ನಮ್ಮ ಬದುಕನ್ನು ರೂಪಿಸಿಕೊಡುವಲ್ಲಿ ಯಶಸ್ವಿಯಾದರು. ನಾನು ಮದುವೆಯಾಗುವಾಗ ವರದಕ್ಷಿಣೆ ಮುಟ್ಟುವುದಿಲ್ಲ ಎಂದು ಹೇಳಿದಾಗ ಅದಕ್ಕೆ ಒಪ್ಪಿ ಮದುವೆ ಮಾಡಿಸಿಕೊಟ್ಟಿದ್ದರು. ಮೊದಲ ಮೊಮ್ಮಗ ಅಂತ ಜಾತಿ ವಿವಾಹವಾಗುವ ತನ್ನ ಇಚ್ಛೆ ವ್ಯಕ್ತಪಡಿಸಿದಾಗ ಸಾಮಾಜಿಕ ಕಟ್ಟು ಪಾಡುಗಳನ್ನು ಬಿಟ್ಟು ಮತ್ತು ತಾನು ನಂಬಿದ ತತ್ವ ಸಿದ್ಧಾಂತಗಳನ್ನು ಬದಿಗಿರಿಸಿ ಕೊನೆಗೂ ತಮ್ಮ ಸಮ್ಮತಿ ನೀಡಿ ಅವರ ಮದುವೆಯಲ್ಲಿ ಪಾಲ್ಗೊಂಡು ನವ ಜೋಡಿಗೆ ಹರಸಿದ್ದರು.

ಮಕ್ಕಳ ಶಿಕ್ಷಣದ ಬಗ್ಗೆ ನನ್ನ ಅಪ್ಪ ಅಪಾರ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದರು. ಮಕ್ಕಳೆಲ್ಲ ಉತ್ತಮ ಸ್ಥಿತಿಯಲ್ಲಿ ಇದ್ದರೂ ವೃದ್ಧಾಪ್ಯದಲ್ಲೂ ಅವರು ಯಾರನ್ನೂ ಅವಲಂಬಿಸದೆ ಸ್ವತಂತ್ರವಾಗಿ ಬದುಕಿದರು. ಅವರು ತಮಗೆ ಅನ್ನಿಸಿದ್ದನ್ನು ನೇರವಾಗಿ ಹೇಳುತ್ತಿದ್ದರು. ಅಪ್ಪ ಪ್ರತಿಯೊಂದು ವಿಚಾರಕ್ಕೂ

ತಮ್ಮದೇ ಆದ ನಿಲುವು ಹೊಂದಿದ್ದರು. ತಮ್ಮೆಲ್ಲಾ ವ್ಯವಹಾರಗಳ ಬಗ್ಗೆ ವ್ಯವಸ್ಥಿತ ದಾಖಲೆಗಳನ್ನು ಇರಿಸಿದ್ದರು. ಮಕ್ಕಳೆಲ್ಲರ ಕೆಲಸ ಕಾರ್ಯಗಳ ಬಗ್ಗೆ ಆಗಾಗ ವಿಚಾರಿಸಿ ತಿಳಿದುಕೊಳ್ಳುತ್ತಾ ಸ್ಪಷ್ಟ ಮಾಹಿತಿ ಪಡೆದುಕೊಳ್ಳುತ್ತಿದ್ದರು. ಇತ್ತೀಚೆಗೆ ಆಸ್ಪತ್ರೆಯಲ್ಲಿ ಮಲಗಿದ್ದುಕೊಂಡೇ ನನ್ನ ಸಮಾಜಕಾರ್ಯದ ಬಗ್ಗೆ ಇತರರಿಗೆ ಹೇಳುತ್ತಾ ಅಭಿಮಾನ ವ್ಯಕ್ತಪಡಿಸುತ್ತಿದ್ದರು. ತನ್ನ ಕುಟುಂಬದ ಬಗ್ಗೆ ಸ್ಪಷ್ಟ ದೂರದರ್ಶಿತ್ವ ಹೊಂದಿ ಅದಕ್ಕನುಗುಣವಾಗಿ ಕಾರ್ಯವೆಸಗುತ್ತಿದ್ದರು. ನನ್ನ ಅಮ್ಮನೊಂದಿಗಿನ ಸುಮಾರು 55 ವರ್ಷಗಳ ಕಾಲದ ದಾಂಪತ್ಯ ಜೀವನದಲ್ಲಿ ಅಮ್ಮ ಅಪ್ಪನ ನಡುವಿನ ಗಾಢ ಪ್ರೀತಿಯನ್ನೂ, ಪರಸ್ಪರ ಸ್ನೇಹ ವಿಶ್ವಾಸದ ಅನ್ಯೋನ್ಯ ದಾಂಪತ್ಯವನ್ನು ನಾನು ಕಂಡಿದ್ದೆ. ಅನಾರೋಗ್ಯದಿಂದ ಆಸ್ಪತ್ರಗೆ ದಾಖಲಿಸಿದಾಗ ನನಗೆ ತೊಂಭತ್ತಾಯಿತು ಇನ್ನು ಯಾವ ಚಿಕಿತ್ಸೆಯೂ ಬೇಡ ಎಂದಿದ್ದರು. ಆಸ್ಪತ್ರೆಯಿಂದ ಹಿಂದಿರುಗಿದ ನಂತರ ಎಂದಿನಂತೆ ಓಡಾಡಿಕೊಂಡು ಖುಷಿಯಿಂದಿದ್ದರು. ಆತ್ಮಾಭಿಮಾನಿಯಾಗಿದ್ದ ಅಪ್ಪ ತನ್ನ 90 ವರ್ಷಗಳ ತುಂಬು ಜೀವನದಲ್ಲಿ ಎಂದೂ ಯಾರನ್ನೂ ಅವಲಂಬಿಸದೆ ಬದುಕಿ ಒಂದು ಮುಂಜಾನೆ ಅನಿರೀಕ್ಷಿತವಾಗಿ ಕುಸಿದರು. ಕೊನೆಗಳಿಗೆಯಲ್ಲಿ ಅಪ್ಪ ಅಮ್ಮನ ಭುಜಕ್ಕೆ ಒರಗಿ ನಾನು ಇನ್ನು ಬದುಕುವುದಿಲ್ಲವೇನೋ ಎನ್ನುವಾಗಲೇ ಅಪ್ಪ ಶಾಶ್ವತ ನಿದ್ರೆಗೆ ಜಾರಿ ಇಹದ ವ್ಯಾಪಾರ ಮುಗಿಸಿದರು. ಅಪ್ಪ ನನ್ನ ಆಂತರ್ಯವನ್ನು ಗಾಢವಾಗಿ ಆವರಿಸಿಕೊಂಡು ನನ್ನೊಳಗೆ ಉಳಿದುಬಿಟ್ಟಿದ್ದಾರೆ. ಅವರು ನಂಬಿ ಬದುಕಿ ತೋರಿದ ಮೌಲ್ಯಗಳು ಮಕ್ಕಳಾದ ನಮ್ಮ ಬದುಕಿಗೆ ಆಸರೆಯಾಗಿವೆ.

3. Growing with my daughters

-Peri

We had planned really well to ensure that our first child should be born in the month of February. We wanted the child to be an Aquarian- a dreamer, intense, passionate, with a taste in aesthetics and an interest in the higher order. Ini was born three weeks before the date, on 19th of January defying all our predictions and planning. This was the first lesson to me as a father. We might have plans for our children but they have their own plans. As a young couple we had only planned for the timing of the arrival of the child but, not for taking care of the child. After elaborate discussions, we decided that I had to be at home looking after the child. I did not have a clue about this whole affair. Looking back, I can say that it was she as a child who taught me how to take care of her instead of the other way round. She taught me to listen and to observe, not to get angry and to be patient. More than anything, she taught me not to jump to conclusions but to wait.

Indu, when she decided that she did not want to go to school, we agreed to home school her. The major part of helping her to learn was done by my wife, Vani. I did offer to do my bit. As a true democratic person, I asked her if I should help her in social studies, and she said NO. I was shocked. I felt that that was my area of expertise and everyone knew that. Now, the second option was fine arts. I asked her if she would be happy if I taught her puppetry and painting, she said a stronger NO! Then I asked her what she wanted to do. She said glass painting. I did not know a thing about this art form. So I started learning and then working with her eventually, learning together. This was the most enjoyable period for both of us. I understood that children do not want to be taught. They just want to learn and for that they need an equal partner to work along, explore, and create.

I think I have strong likes and dislikes. It is Ini who confronts my strong statements saying- "Appa that is how you are seeing it, but that may not necessarily be true". Many times I have later come to understand, that

what I was proclaiming was not true. Her confrontations have helped me hold my views lightly. Recently Indu was to perform the role of Soorpanaki in Yakshagana. I am well-known for this role and started sharing my understanding with Indu. It was a pleasant surprise to see Indu's version of Soorpanakhi. It was different from my act. This had an element of innocence and mischief, which made Rama look more violent. The next time I have an opportunity to perform, I will surely incorporate these two elements that I learned from Indu.

In May, all of us were involved in the making of a documentary film. Indu was the Production Manager and Ini the Assistant Director. On our way to the location, we saw a fruit shop and I wanted to buy fruits. Indu said that there is no need to buy, since there were a few oranges still left in the basket and our budget did not permit us to buy more food items. I stopped buying the fruit but, it made me think on how thoughtful and professional these children have become.



You need not always say yes to your daughters. Ini appreciated my decision when I said a strong no to her demand for a diamond nose ring and an immediate yes to go for a dance course in Nrithyagram, probably costing me more than the nose ring.

Children want their fathers to be good and carry themselves with dignity. For that you need not be a strict stereotypical father. You can be a jovial, lighthearted father, who sometimes acts stupid and is a joker. But, I feel you need to be a father who cares, not continuously protecting them but, allowing them to be free and independent, not very close that suffocates them and neither very far that alienate you. ***Just being there always for them….***

4. ಓ ನನ್ನ ತಂದೆ!

–ವೈಶಾಲಿ ಎಮ್ ಅನಿ

ಕಣ್ಣು ಮುಚ್ಚುವ ಮುನ್ನ
ನಗು ಮಾಸುವ ಮುನ್ನ
ಜೀವ ಹೋಗುವ ಮುನ್ನ
ಬಂದು ನೋಡೆಯಾ ತಂದೆ

ಬಾಲ್ಯದಲ್ಲಿ ಬಾ ಎಂದು ಕರೆದೆ
ನೋವಿನಲ್ಲಿ ಕಂದಾ ಎಂದು ಕರೆದೆ
ನಲಿವನ್ನು ವ್ಯಕ್ತಪಡಿಸುವ ಭಾವ ತುಂಬಿದೆ
ನೋವು ಎದುರಿಸುವ ಶಕ್ತಿ ತುಂಬಿದೆ
ಜೀವ ತುಂಬಿದೆ ಎನ್ನ ತಂದೆಯೇ!

ಬೆಟ್ಟದ ತುದಿಯಲ್ಲಿ ಕೂಗಿ ಕರೆದೆ
ಕಡಲ ತೀರದಲ್ಲಿ ನಿಂತು ಕರೆದೆ
ನಿಸರ್ಗದ ಮಡಿಲಲ್ಲಿ ಹೋಗಿ ಕರೆದೆ
ಎಷ್ಟು ಕೂಗಿ ಕರೆದರು ನಿರಂತರ
"ತಂದೆ" ಎಂಬ ಎರಡಕ್ಷರ.

5. Dad, you will always remain my number 1 !

\- **Shruthi**

A relationship that I cherished the most while it lasted for the first 14 years of my life. One rainy day in the month of May he was gone suddenly for ever to a land that is the final destination of every single living being on this planet. Cried, cursed the creator like every teenage girl would. Suddenly felt vulnerable and helpless wondering the direction that life was going to take. Felt like someone had given a strong blow to my backbone. But then had to get up for my Mom, brother and above all for myself. Became an adult overnight!!

The next couple of years was mostly running around finding a direction to our lives. During those years thoughts of my father came during some fleeting moments. Once the running around stopped and I found a sense of purpose in my life, I began to miss him so much, which I continue to even today after 3 decades. It's only during these years I realized what I learnt from him, how much he kept the family together and why I was actually missing him.

With moist eyes, I share my final thoughts – I thank God that he gave me a fine human being as my father who did his best while he was around…

6. ತಂದೆಯೇ ಹೇಳಬೇಕಾದ ಸತ್ಯಗಳು

– **ಲಕ್ಷ್ಮಿದೇವಿ ಬಿ ಎಸ್.**

“ಕಾಣದ ದೇವರು ಊರಿಗೆ ನೂರು, ಕಾಣುವ ತಂದೆಯೇ ಪರಮ ಗುರು” ನಮಗೆ ಬೆಳಕು ನೀಡುವ, ನಿತ್ಯ ದರ್ಶನ ನೀಡುವ ಸೂರ್ಯ ಭಗವಂತನಂತೆಯೇ ದಿನವೂ ನಮ್ಮ ಕಣ್ಣಿಗೆ ಗೋಚರಿಸುವ, ನಮ್ಮನ್ನು ಅಕ್ಕರೆಯಿಂದ ಮುದ್ದಾಡಿ, ಲಾಲಿಸಿ, ಪಾಲಿಸಿದ, ನಮ್ಮ ಕಷ್ಟಕ್ಕೆ ತಾನೂ ಮರುಗಿ, ನಮ್ಮ ಯಶಸ್ಸು ಕಂಡು ಹಿರಿಹಿಗ್ಗಿ ಹಾರೈಸುವ, ನಮ್ಮ ಸ್ಥಾನ ಮಾನವನ್ನು ಕಾಪಾಡಿಕೊಂಡು ಬಂದಂತಹ ನಮ್ಮ ತಂದೆಯ ಬಗ್ಗೆ ವರ್ಣಿಸಲು ನಾನಂತೂ ಖಂಡಿತಾ ಶಕ್ತಳಲ್ಲ. ತಂದೆಯ ಬಗ್ಗೆ ಬರೆಯಲು ಇದೆಷ್ಟು ಪುಟಗಳು ಸಾಲುವುದಿಲ್ಲ. ಸೃಷ್ಟಿಗೆ ಕಾರಣಕರ್ತನು, ಸಣ್ಣ ನೋವೋ ಆಗದಂತೆ ಕಾಪಾಡಿ, ಪೋಷಿಸಿ ತನ್ನ ಜೀವನ ಪರ್ಯಂತ ಬೆವರು ಸುರಿಸಿದ ಕಷ್ಟ ಜೀವಿ.

ನನ್ನ ತಂದೆ ಕೇಂದ್ರ ಸರ್ಕಾರಿ ನೌಕರಿಯಲ್ಲಿದ್ದು ಸೇವೆ ಸಲ್ಲಿಸಿದವರು. ನಮ್ಮದು ಮದ್ಯಮ ವರ್ಗದ ಕುಟುಂಬ ತಂದೆ, ತಾಯಿ, ಮೂವರು ಹೆಣ್ಣು ಮಕ್ಕಳು, ಒಬ್ಬನೇ ಮಗ ಇದೇ ನಮ್ಮ ಕುಟುಂಬ. ಜೊತೆಗೆ ಅಜ್ಜಿ, ತಾತ, ಚಿಕ್ಕಮ್ಮ, ಚಿಕ್ಕಪ್ಪಂದಿರು, ಅತ್ತೆ, ಮಾವಂದಿರನ್ನೊಳಗೊಂಡ ತುಂಬು ಕುಟುಂಬ. ನನ್ನ ತಂದೆ ಮುಗ್ಧ ಹಾಗೂ ಸ್ನೇಹ ಜೀವಿ. ಯಾವುದೇ ಕೆಟ್ಟ ಚಟಗಳನ್ನು ಮೈಗೂಡಿಸಿಕೊಂಡಿಲ್ಲದ, ತತ್ವ ಸಿದ್ಧಾಂತಗಳೊಂದಿಗೆ ಜೀವನ ನಡೆಸುತ್ತಿರುವವರು. ಅವರ ಆದರ್ಶ ಜೀವನದಲ್ಲಿ ಕೇವಲ ತೃಣ ಮಾತ್ರ ನಾವುಗಳು ಅಳವಡಿಸಿಕೊಂಡು ಬಂದಿದ್ದೇವೆಂದನಿಸುತ್ತದೆ. ಅವರಿಂದ ಕಲಿಯುವುದು ಬಹಳಷ್ಟಿದೆ. ನನ್ನ ಜೀವನದಲ್ಲಿ ಕಲಿತ ಎಷ್ಟೋ ಪಾಠಗಳಲ್ಲಿ ಇದೊಂದು ಸಣ್ಣ ಘಟನೆ ನಿಮ್ಮ ಮುಂದಿಡಲು ಪ್ರಯತ್ನಿಸುತ್ತೇನೆ.

ನಾನು 6 ನೇ ತರಗತಿಯಲ್ಲಿ ಓದುತ್ತಿದ್ದೆ. ಆ ಸಮಯದಲ್ಲಿ ನನ್ನ ತಾಯಿ ಅನಾರೋಗ್ಯದ ನಿಮಿತ್ತ ತನ್ನ ತವರು ಮನೆಯಲ್ಲಿದ್ದರು. ಆಗ ನಾನು ನನ್ನ ತಂದೆ ಹಾಗೂ ಇಬ್ಬರು ತಂಗಿಯರನ್ನು ನೋಡಿಕೊಂಡು ಕುಟುಂಬ ನಡೆಸುತ್ತಿದ್ದೆ. ನನ್ನ ತಂದೆ ಎಂದೂ ಸಹ ನಮ್ಮನ್ನು ಹೊರಗಡೆ ಕೆಲಸಕ್ಕಾಗಿ ಕಳುಹಿಸಿದವರಲ್ಲ. ನಾವು ಸರ್ಕಾರಿ ಕ್ವಾರ್ಟರ್ಸ್‌ನಲ್ಲಿ ವಾಸಿಸುತ್ತಿದ್ದೆವು. ಅಂದು ನನ್ನ ತಂದೆ ಕಛೇರಿಯಿಂದ ಬರಲು ತಡವಾದ ಕಾರಣ ಮನೆಯಲ್ಲಿ ನೀರು ಇಲ್ಲದಿದ್ದರಿಂದ ನಾನೇ ನೀರು ತರಲು ಬೀದಿಯಲ್ಲಿರುವ ಬೋರ್‌ವೆಲ್‌ಗೆ ಹೋದೆ. ನನಗೆ ಬೋರ್‌ವೆಲ್ ಹೊಡೆಯಲು ಶಕ್ತಿ ಇಲ್ಲದ ಕಾರಣ ಒಬ್ಬ ಗಂಡಸು ನೀರನ್ನು ತುಂಬಿಸಿ ನನ್ನ ಸೊಂಟದ ಮೇಲಿಟ್ಟು ಕಳುಹಿಸಿದ. ಅದೇ ಸಮಯಕ್ಕೆ ನನ್ನ ತಂದೆ ಅಲ್ಲಿಗೆ ಬಂದು ನನ್ನಿಂದ ಬಿಂದಿಗೆಯನ್ನು ತೆಗೆದುಕೊಂಡು ಮನೆಗೆ ಬಂದರು. ಸಾಯಂಕಾಲ ನನ್ನನ್ನು ಹಾಗೂ ನನ್ನ ತಂಗಿಯರನ್ನು ಕರೆದು ಹೇಳಿದ ಮಾತು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ ಅದೇನೆಂದರೆ, ಮನೆಯಲ್ಲಿ ನನ್ನನ್ನು ಪ್ರೀತಿಯಿಂದ ಶಶಿ ಎಂದೇ ಕರೆಯುವುದು "ನೋಡು ಶಶಿ ಇವತ್ತು ನೀನು ನೀರು ತರಲು ಹೋದಾಗ ಆ ಗಂಡಸು ನಿನ್ನ ಸೊಂಟಕ್ಕೆ ಬಿಂದಿಗೆ ಇಟ್ಟನು, ಇನ್ನು ಮುಂದೆ ಅದಕ್ಕೆ ಅವಕಾಶ ಕೊಡಬಾರದು ಅಂದರೆ ಬಿಂದಿಗೆಯನ್ನು ನೀನೇ ಎತ್ತಿಕೊಳ್ಳಬೇಕು ಅದೇ ರೀತಿ ಮಕ್ಕಳನ್ನು ಸೊಂಟದಲ್ಲಿ ಇಟ್ಟುಕೊಂಡು ಕೊಡುವಾಗ ಅವರನ್ನು ಕೆಳಗೆ ಇಳಿಸಿ ಬೇರೆಯವರು ತೆಗೆದುಕೊಳ್ಳಲು ಬಿಡಬೇಕು ಇಲ್ಲವೇ ನಿನ್ನ ಸೊಂಟದಿಂದ ತೆಗೆದು ಕೈಯಲ್ಲಿಡಿದು ನೀಡಬೇಕು" ಈ ಘಟನೆಯಿಂದ ನನಗೆ ಅಂದು ನನ್ನ ತಂದೆಯ ಮೇಲೆ ಸ್ವಲ್ಪ ಸಿಟ್ಟು ಬಂತು ಏಕೆಂದರೆ ಇದನ್ನೆಲ್ಲ ಯಾವ ದೊಡ್ಡ ತಪ್ಪೆಂದು ಹೇಳುತ್ತಿದ್ದಾರೆ ಎಂದೆನಿಸಿತು. ಕಾಲಕ್ರಮೇಣ ಅಂದು ನನ್ನ ತಂದೆ ಹೇಳಿದ ಆ ಮಾತಿನ ಸತ್ಯಾಂಶ ಅರ್ಥವಾಯಿತು.

ಇಂದು ನಡೆಯುತ್ತಿರುವ ಅನೇಕ ಘಟನೆಗಳು ತಂದೆಯೇ ಮಗಳ ಮೇಲೆ ನಡೆಸುತ್ತಿರುವ ದೌರ್ಜನ್ಯ, ಅತ್ಯಾಚಾರವೆಸಗುತ್ತಿರುವ ಪ್ರಪಂಚದಲ್ಲಿ ನನ್ನ ತಂದೆ ಗುಡ್ ಟಚ್ ಹಾಗೂ ಬ್ಯಾಡ್ ಟಚ್ ಬಗ್ಗೆ ಎಷ್ಟು ಸೂಕ್ಷ್ಮವಾಗಿ ಮನವರಿಕೆ ಮಾಡಿಕೊಟ್ಟ ನನ್ನ ತಂದೆಗೆ ನಾನು ಚಿರಋಣಿ.

ಉಪ್ಪು ತನ್ನದೆಯಾದ ನಿಗೂಢತೆಯನ್ನು, ರುಚಿಯನ್ನು ತನ್ನ ಮಡಿಲಲ್ಲಿ ತುಂಬಿಕೊಂಡಿದೆ. ಅದರ ರುಚಿಯನ್ನು ಮನಸ್ಸು, ಕಣ್ಣಿಂದಾಗಲಿ ನೋಡಿ ಅರಿಯಲು ಸಾಧ್ಯವಿಲ್ಲ ಅದನ್ನು ನಮ್ಮ ನಾಲಿಗೆಯಿಂದ ಮಾತ್ರ ಅರಿಯಲು ಸಾಧ್ಯ. ಅದೇ ರೀತಿ 'ತಂದೆ' ಎಂದರೆ ಶಬ್ಧದಲ್ಲಿ ಹೇಳಲು ಸಾಧ್ಯವಿಲ್ಲ ತಂದೆಯ ಪ್ರೀತಿ, ಮಮತೆ, ಅಕ್ಕರೆ ಹಾಗೂ ರಕ್ಷಣೆಯನ್ನು ಅನುಭವಿಸಿದವರಿಂದ ಮಾತ್ರ ಸಾಧ್ಯ. ಆ ಅದೃಷ್ಟ ನನಗೆ ಸಿಕ್ಕಿದ್ದು ನನ್ನ ಪೂರ್ವ ಜನ್ಮದ ಪುಣ್ಯ ಇದು ನಿರಂತರವಾಗಿರಲೆಂಬುದೇ ನನ್ನ ಆಸೆ.

7. My Father…

\- **Randeep Kaur**

Someone who is strong and loving…
He is somebody one could count upon…
His presence gave a sense of security!
The moment the word Father is spelled, I go back into the memory lane…
Those memories are still fresh in my mind…
Holding his warm hands and walking on the streets…
Cuddling myself into his arms…
He loved me and he still does…
He held me, he protected me…
He is always there to bring smile back to my face…
Those childhood times, his sharing stories and never getting annoyed…
His cooking delicious food and feeding me with his hands…
Those long chats…
His sharing Akbar Birbal Jokes at bed time…
Those long rail journeys and playing cards with him…
His pampering me with his love and affection….
Those joyful drives on the Mussoorie road…
His warmth never left me…
He is always walking besides me even when I feel I am alone…

8.ಜನುಮ ಜನುಮಕೂ......

–ದಿವಾಕರ ಕೆ.

ರಾತ್ರಿಯಿಡೀ ಜ್ವರ ಬಂದು ನಿತ್ರಾಣನಾಗಿ ನಡೆಯಲು ಶಕ್ತಿಯಿರಲಿಲ್ಲ.

ಮೈಯೆಲ್ಲ ಕೆಂಡದಂತೆ ಬಿಸಿಯಾಗಿ ಬೆವರಿಹೋಗಿತ್ತು. ಬಾಯಿಯಿಂದ ದುರ್ವಾಸನೆ ಹೊರಹಾಕುತ್ತಿತ್ತು. ಹಸಿವೆಯಾದರೂ ಆಹಾರವೇ ಬೇಡ ಅನ್ನಿಸುತ್ತಿತ್ತು. ಬೆಳಿಗ್ಗೆ ಎದ್ದಾಗ ಅಮ್ಮ ನನ್ನ ಹತ್ತಿರ ಬಂದು ಏನಾಯ್ತು ಎಂದು ನನ್ನ ಮೈ ಮುಟ್ಟಿದಾಗ ಕೆಂಡದಂತ ಜ್ವರ ಬೇಯುತ್ತಿತ್ತು. ಅಮ್ಮ ಗಂಧವನ್ನು ನುಣ್ಣಗೆ ತೇಯ್ದು ಮೈಗೆಲ್ಲ ಹಚ್ಚಿದಳು. ಮುಂಜಾನೆಯೇ ಎದ್ದು ಹೊಲಕ್ಕೆ ಹೋಗಿ ಮನೆಗೆ ಬಂದ ಅಪ್ಪನಿಗೆ ಅಮ್ಮ ಹೀಗೆ ಹೇಳಿದಳು. 'ಮಗುಗೆ ಜ್ವರ ಬಂದಿದೆ ಆಸ್ಪತ್ರೆಗೆ ಕರಕೊಂಡು ಹೋಗ್ಬಹುದಿತ್ತು' ಎಂದು. ಅಪ್ಪ ಆಗ ತಾನೇ ಹೊಲದಿಂದ ಬಂದು ಕಾಫಿ ಹೀರುತ್ತಾ ಕುಳಿತ್ತಿದ್ದರು. ಅವರಿಗೆ ಸಿಟ್ಟು ಬಂದುಬಿಟ್ಟಿತು. 'ಯಾವಾಗ್ಲೂ ಇದ್ದಿದ್ದೇ, ಕೆಮ್ಮು, ನೆಗಡಿ, ವಾಂತಿ, ಬೇದಿ, ಜ್ವರ ಇದೇ ರಾಮಾಯಣ' ಎಂದು ಜೋರಾಗಿ ಬೈದುಬಿಟ್ಟರು. ನಾನು ನನ್ನ ಪಾಡಿಗೆ 'ಅಪ್ಪ ಯಾಕೆ ಹೀಗೆ ಬೈಯ್ಯುತ್ತಾರೆ'ಎಂದು ಕಂಬಳಿ ಹೊದ್ದು ಮಲಗಿಬಿಟ್ಟೆ. ಆದರೂ ಸಹಿಸಲಾರದೆ ಅಪ್ಪ ಅಲ್ಲಿಂದ ಎದ್ದು ನನ್ನ ಹತ್ತಿರ ಬಂದರು. ಮೈ ಸವರಿ ನೋಡಿದರು. ದೇಹ ಸುಡುತ್ತಿತ್ತು. ತಡ ಮಾಡದೇ ನನ್ನನ್ನು ಆಸ್ಪತ್ರೆಗೆ ಕರೆದು ಕೊಂಡು ಹೋಗಲು ನಿರ್ಧರಿಸಿದರು. ಅಮ್ಮ ನನಗೆ ಬಟ್ಟೆ ತೊಡಿಸಿ ಕುಡಿಯಲು ಹಾಲು ಕೊಟ್ಟಳು. ಹಾಲು ಬಾಯಿಗೆ ಹಾಕಿ ಕುಡಿಯಲು ಸಾಧ್ಯವಾಗದೆ ತಕ್ಷಣ ಮತ್ತೆ ಮುಕ್ಕರಿಸಿಬಿಟ್ಟೆನು. ಅಪ್ಪನಿಗೆ ನನ್ನ ಸ್ಥಿತಿ ನೋಡಿ ಬೇಸರವಾಯಿತು.

ಅಪ್ಪ ನನ್ನನ್ನು ಹೆಗಲ ಮೇಲೆ ಹೊತ್ತು ನಮ್ಮೂರಿನಿಂದ ಸುಮಾರು ಎರಡು ಕಿ.ಮೀ. ದೂರವಿದ್ದ ಬಸ್‌ಸ್ಟ್ಯಾಂಡ್‌ಗೆ ನೆಡೆದೇ ಹೋದರು. ಅಪ್ಪ ಬೈಯ್ದರು ನನ್ನ ಮೇಲೆ ಇಷ್ಟು ಪ್ರೀತಿ ಇಟ್ಟಿರುವರಲ್ಲ ಎನಿಸಿತು. ಹೇಗೋ ಬಸ್ ಹತ್ತಿ ಸಾಗರದ ಆಸ್ಪತ್ರೆಗೆ ಹೋದೆವು. ಆ ಆಸ್ಪತ್ರೆಯ ಡಾಕ್ಟರ್

ಹೆಸರು ನಾರಾಯಣ ಐತಾಳ ಎಂದು. ಅಪ್ಪ ಡಾಕ್ಟರ್ ಹತ್ತಿರ ಹೋಗಿ ಏನೋ ಗೊಣಗಿದರು. ನನ್ನನ್ನು ಆಸ್ಪತ್ರೆಯಲ್ಲಿ ಬಿಟ್ಟು, ಮನೆಯಿಂದ ತಂದ ಕೈ ಚೀಲವನ್ನು ಹಿಡಿದು, 'ನನಗೆ ಸ್ವಲ್ಪ ಕೆಲಸ ಇದೆ, ಒಂದ್ ಐದು ನಿಮಿಷ ಎಂದು ಹೇಳಿ' ಆಸ್ಪತ್ರೆಯ ಮೆಟ್ಟಿಲು ಇಳಿಯುತ್ತಿರುವಾಗ ಅಪ್ಪನ ಪರಿಚಯದವರೊಂದಿಗೆ ಹೀಗೆ ಮಾತನಾಡುತ್ತಿರುವುದನ್ನು ನಾನು ಕೇಳಿಸಿಕೊಂಡೆ. ನನ್ನ ಕಿರಿಯ ಮಗುಗೆ ತುಂಬಾ ಜ್ವರ ಬಂದುಬಿಟ್ಟಿದೆ. ಅವನಿಗೆ ಔಷಧಿ ಕೊಡಿಸುವ ಅಂತ ಕರಕೊಂಡು ಬಂದಿದ್ದೀನಿ. 'ಏನ್ಮಾಡೋದು ಕೈಯಲ್ಲಿ ಒಂದು ನಯ ಪೈಸೆ ಇಲ್ಲ, ನನಗೆ ತಲೆ ಕೆಟ್ಟಂಗೆ ಆಗ್ಯೆತಿ, ಅದಕ್ಕಾಗಿ ಒಂದು ಕೆ.ಜಿ ಅಡಿಕೆ ತಂದಿದ್ದೀನಿ, ಅದನ್ ಮಾರಿ ಎಷ್ಟ್ ಹಣ ಬರುತ್ತೋ ಅದರಲ್ಲಿ ಔಷಧಿ ಮಾತ್ರೆ ತಗೊಂಡು ಹೋಗ್ತಿನಿ, ಒಟ್ ಅವನಿಗೆ ಹುಷಾರ್ ಆದ್ರೆ ಸಾಕು,' ಅಂತ ಹೇಳಿ ಹೊರಟುಹೋದರು. ಅಷ್ಟರಲ್ಲಿ ಡಾಕ್ಟರ್ ಒಬ್ಬೊಬ್ಬರೇ ರೋಗಿಗಳನ್ನು ಒಳಗೆ ಕರೆದು ಅವರಿಗೆ ಚಿಕಿತ್ಸೆ ನೀಡಿ ಕಳಿಸುತ್ತಿದ್ದರು. ನನ್ನ ಮುಖ ನೋಡಿ 'ಇನ್ ಸ್ವಲ್ಪ ಹೊತ್ತು ನಿಮ್ಮ ಅಪ್ಪ ಬರುತ್ತಾರೆ ಅಲ್ಲೇ ಕೂತ್ಕೋ ಮರಿ'ಎಂದು ಹೇಳಿ ಮತ್ತೆ ಒಳಗೆ ಹೋದರು.



ಸ್ವಲ್ಪ ಸಮಯದ ನಂತರ ಅಪ್ಪ ಆಸ್ಪತ್ರೆಗೆ ಬಂದರು. ಡಾಕ್ಟರ್ ಹೊರಗೆ ಬಂದು ನನ್ನನ್ನು ಒಳಗೆ ಕರೆದರು. ಆಗ ಅಪ್ಪ ಡಾಕ್ಟರ್, ನಮ್ಮ ಮಗನನ್ನು ಸ್ವಲ್ಪ ನೋಡಿ, ನಾನು ದುಡ್ಡು ತರೋದು ತಡವಾಯ್ತು. ತಂದ ಅಡಿಕೆ ದುಡ್ಡು ಸಾಕಾಗದೆ, ಯಾರೋ ಪುಣ್ಯಾತ್ಮರು ಸಾಲ ನೀಡಿ ಸಹಾಯ ಮಾಡಿದ್ರು. ಔಷಧಿ, ಮಾತ್ರೆಗೆ ಸಾಕಾಗಬಹುದು, ಸದ್ಯಕ್ಕೆ 'ಒಂದೆರಡು ಕಡಿಮೆ ಮಾತ್ರೆ ಬರೆದುಕೊಡಿ' ಅಂತ ಹೇಳಿದರು. ಆ ಮಾತು ಕೇಳಿ ನನಗೆ ತುಂಬಾ ನೋವಾಯಿತು.

ನನಗಾಗಿ ನನ್ನ ಅಪ್ಪ ಎಷ್ಟೊಂದು ಕಷ್ಟಪಡುವರೆಂದು ನಾನು ಮನಸ್ಸಿನಲ್ಲಿಯೇ ಯೋಚಿಸಿದೆನು. ಜನ್ಮಕೊಟ್ಟ ತಂದೆಯನ್ನು ಎಂದೆಂದಿಗೂ ಜನುಮ ಜನುಮದಲ್ಲೂ ಮರೆಯಲು ಸಾಧ್ಯವೇ.........?

9. Father

-Y.J.Ravindraprakash

My father was said to be highly intelligent and good at math. He was a civil engineer by profession and was highly respected among his colleagues. At home he was reserved with us. What I have understood about my father's other side has come to me from my father's colleagues, my relatives and my own experiences with him.

He was a chain-smoker. As far as I remember he used to smoke 4 to 5 packs of cigarettes every day. He struggled a lot to give up cigarettes several times in his life but he succeeded only after his retirement. I was very surprised at his will power. Till the date of his retirement, he was a heavy smoker, but overnight he gave up his long standing companionship with cigarettes. Isn't it something great!

I think deep in his heart, he wanted me to become a doctor or an engineer but I failed him in this regard. He never expressed his disappointment. Not only that, I did not serve in the government service and entered

social sector. Then also he did not discuss with me about my career. He respected my decision to be on my own.

He was a sportsperson. He used to play outdoor games like football, volley ball and tennis; indoor games like rummy, 28(a sort of Bridge) in cards, carom, and chess. I got my training in playing chess and carom from him. He was good and I still remember the day when I won over him in both carom and chess. He never liked to lose. He would be very disturbed when he lost a game, especially games that required application of intelligence and physical skills. He used to go to the club every day. On the days he won the 28 game, he would come home beaming and give whatever he won to my mother and on the days he lost, he would be sullen and would be blaming himself for the miscalculations that cost him. (By the way, the winning stake never exceeded 50 paise in the 1960's and a few rupees in the 1970's.

He liked driving. In fact I think he had a passion for car driving. He used to ask his office driver to sit in the back and drive the jeep most of the way. One great thing I remember is we travelled a lot and visited many places of interest with him in a second hand car which he purchased in 1960's. I was the eldest son and it was my duty to wash the car and also push the car whenever it stopped in the middle of the road (which happened frequently).

One thing I regret to this day is that I never understood my father speak with love and respect when he was alive. I never could interact with him freely and always looked at him with diffidence and fear. Now as I am trying to put down my feelings in this article, I realize what a great soul he was despite his limitations and shortcomings. For him life was always a challenge and a struggle. But he never let go or surrendered to his fears. I think I have inherited these qualities from him.

10. ಕಾಲ ಚಕ್ರದಲ್ಲಿ ಅಪ್ಪ ಬದಲಾದನೇ?

–ನಾಜೀವಿ.

ದಪ್ಪ ಮೀಸೆಯ, ಗಡುಸು ಮಾತಿನ, ಖಡಕ್ ನಿರ್ಧಾರದ, ತುಸು ಹೆಚ್ಚೇ ಅನ್ನಿಸುವ ಗಾಂಭೀರ್ಯದ ಅಪ್ಪ ಕಾಲಚಕ್ರದಲ್ಲಿ ಬದಲಾದನೇ? ಇಲ್ಲಿ ಎರಡು ವಿಭಿನ್ನ ಮುಖದ ಸ್ವಗತವಿದೆ. ಓದಿ ಯೋಚಿಸಿ..................

ಸ್ವಗತ–೦೧

ಅಪ್ಪ ನಿಮಗೆಷ್ಟು ತಾಳ್ಮೆ? ಅವತ್ತು ಸಂಜೆ ನೀವು ನನಗೆ ಫೈಲ್ ಅನ್ನು ಮನೆಯಲ್ಲಿರಿಸೆಂದು ಕೊಟ್ಟಿರಿ, ಕೊಡುವಾಗ ನೀವು ಹೇಳಿದ್ದಿರಿ ಜೋಪಾನವೆಂದು ಆದರೆ ಅದನ್ನು ಎತ್ತಿಕೊಂಡು ಹೊರಗೆ ಬರುವಾಗ ನನ್ನ ಗೆಳೆಯರು ಕರೆದರೆಂದು ಕ್ರಿಕೆಟ್ ಆಡಲು ಹೋಗಿ ಫೈಲ್ ಅನ್ನು ಕಳೆದು ನಿಮ್ಮ ಮುಂದೆ ನಿಂತಿದ್ದೆ.

ನೀವು ನನ್ನ ಮೇಲೆ ಕೋಪಗೊಂಡು ಕೂಗಾಡಿ ಹೊಡೆಯಬಹುದೆಂದು ಭಾವಿಸಿದ್ದೆ. ಆದರೆ ನಾನು ನಡುಗುತ್ತಾ ನಿಮ್ಮ ಮುಂದೆ ವಿಷಯ ಹೇಳಿದಾಗ ನೀವು ನಕ್ಕು ಹೇಳಿದಿರಿ, 'ಪರವಾಗಿಲ್ಲ ಬಿಡು'.

ಅಜ್ಜನ ಕಾಲದಿಂದ ಬಂದ ವಾಚು ನೀವು ಎಲ್ಲಿ ಹೋದರು ಅದು ನಿಮ್ಮ ಕೈಯಲ್ಲಿ ಇರುತ್ತಿತ್ತು. ಅದನ್ನು ಕಟ್ಟಿದಾಗ ನನ್ನ ಅಪ್ಪನೇ ನನ್ನೊಂದಿಗೆ ಇದ್ದರೆಂಬ ಭಾವನೆ ಬರುತ್ತದೆ ಎಂದು ಹೇಳುತ್ತಿದ್ದಿರಿ. ಕಾಲೇಜಿಗೆ ಹೋಗುವಾಗ ನಿಮ್ಮನ್ನು ಕೇಳದೇ ಅದನ್ನು ಕಟ್ಟಿಕೊಳ್ಳಲು ಹೋಗಿ ನಿಮ್ಮ ಮುಂದೆಯೇ ಅದನ್ನು ಬೀಳಿಸಿ ಒಡೆದೆ. ಆಗಲೂ ನೀವು ಬೆನ್ನು ತಟ್ಟಿ ಹೇಳಿದಿರಿ 'ಹೋಗಲಿ ಬಿಡು'.

ಅವತ್ತು ಮನೆಗೆ ಕಾರು ತಂದು ಒಂದು ವಾರವಾಗಿತ್ತು. ನೀವು ಅದನ್ನು ಅತ್ಯಂತ ನೆಚ್ಚಿಕೊಂಡು ಮುತುವರ್ಜಿಯಿಂದ ಅದನ್ನು ನಿತ್ಯ ಒರೆಸಿ ಇಡುತ್ತಿದ್ದಿರಿ. ನೀವು ಬೇಡವೆಂದರು ಸ್ನೇಹಿತನ ಮನೆಯ ಪಾರ್ಟಿಗೆಂದು ತೆಗೆದುಕೊಂಡು ಹೋಗಿ ಅದನ್ನು ಮರಕ್ಕೆ ಗುದ್ದಿ ತಂದು ನಿಲ್ಲಿಸಿದೆ.

ಆಗಲೂ ನೀವೂ ಕೋಪಗೊಳ್ಳಲಿಲ್ಲ. ನನಗೆ 'ನೀನು ಮುಖ್ಯ ಕಣೋ, ಕಾರು ಮುಖ್ಯ ಅಲ್ಲ' ಎಂದಿರಿ.

ಅದು ನಿಮ್ಮ ನಿವೃತ್ತಿಯ ಸಮಯ. ನನಗೆ ಕೆಲಸವೇ ಇರಲಿಲ್ಲ. ಯೌವ್ವನದ ಹುಚ್ಚಿನಲ್ಲಿ ಅಪ್ಪ ನಿನಗೆ ಒಂದು ಮಾತೂ ಹೇಳದೆ, ನೆಚ್ಚಿದ ಹುಡುಗಿಯ ಕೈ ಹಿಡಿದು ನಿಮ್ಮ ಮುಂದೆ ನಿಂತಿದ್ದೆ, ಆಗ ಅಮ್ಮ ಗೋಳಾಡಿ ಹಳಿದರೂ ನೀವೂ 'ನಿನ್ನ ಕೈ ಹಿಡಿದು ಬಂದವಳನ್ನು ಕೊನೆತನಕ ಕಾಯಬೇಕು' ಎಂದು ಸಲಹೆ ನೀಡಿ ಬೇರೆ ಮನೆ ಮಾಡಿಕೊಟ್ಟು ಖರ್ಚಿಗೆ ಹಣ ನೀಡಿದಿರಿ.

ಈಗ ನನಗೆ ಹತ್ತು ವರ್ಷದ ಮಗನಿದ್ದಾನೆ ನಿತ್ಯವೂ ಒಂದಲ್ಲಾ ಒಂದು ಕಾರಣಕ್ಕೆ ಕೋಪಗೊಂಡು ಹೊಡೆಯುತ್ತೇನೆ. ತಾಳ್ಮೆ ಕಳೆದುಕೊಂಡಾಗಲೆಲ್ಲಾ ಮತ್ತೆ ಹೀಗಾಗಬಾರದು ಎಂದು ಯೋಚಿಸುತ್ತೇನೆ. ಸಾದ್ಯವಾಗುತ್ತಿಲ್ಲ.

ಸ್ವಗತ– ೦೨

ಅಪ್ಪ ನಿಮಗೆಷ್ಟು ಕೋಪ? ನೀವು ಮನೆಯಲ್ಲಿ ಇದ್ದಷ್ಟು ಹೊತ್ತು ನಮಗೆ ಮನೆ ಜೈಲಿನಂತೆ ಭಾಸವಾಗುತ್ತಿತ್ತು.

ಬೀದಿ ಮಕ್ಕಳು ಹೊರಗೆ ಆಡುವಾಗ ನನಗೂ ಹಾಗೆ ಕಿರುಚಿ ಆಡಬೇಕು ಎನ್ನಿಸುತ್ತಿತ್ತು. ನನಗೇ ಈಗಲೂ ನೆನಪಿದೆ. ಅವತ್ತು ಮನೆಯಲ್ಲಿ ಆಕಸ್ಮಿಕವಾಗಿ ಟಿಪಾಯಿ ಮೇಲಿನ ಗ್ಲಾಸ್ ಒಡೆದೆ. ನಾನು ಜೀವನದಲ್ಲಿ ನೆನಪಿಡುವ ಹಾಗೆ ಹೊಡೆದಿರಿ. ನನಗೆ ಕಾನ್ವೆಂಟ್ ಹೈಸ್ಕೂಲ್ ಸೇರಲು ಇಷ್ಟವಿರಲಿಲ್ಲ ನೀವು ನಿಮ್ಮ ಪ್ರತಿಷ್ಠೆಗಾಗಿ ಸೇರಿಸಿದಿರಿ. ನನ್ನ ಸಾಮರ್ಥ್ಯ ಮೀರಿ ಪ್ರಯತ್ನಿಸುತ್ತಿದ್ದೆ. ಆದರೂ ಒಳ್ಳೆಯ ಮಾರ್ಕು ಬರುತ್ತಿರಲಿಲ್ಲ. ಪ್ರತಿ ಬಾರಿ ನಿಮಗೆ ಮಾರ್ಕ್ಸ್ ಕಾರ್ಡ ತೋರಿಸಿದಾಗ ನನಗೆ ನರಕ ನೋಡಿದಂತಾಗುತ್ತಿತ್ತು. ನಿತ್ಯ ನೀವು ನನ್ನ ಬಗ್ಗೆ ಅಮ್ಮನೊಂದಿಗೆ ಜಗಳವಾಡುತ್ತಿದ್ದಿರಿ, ನಿಮ್ಮ ಇಡೀ ಕುಟುಂಬವೇ ದಡ್ಡ ಶಿಖಾಮಣಿಗಳು ಎಂದೂ, ಈ ಗುಣ ನಿನ್ನ ಮಗನಿಗೂ ಬಂದಿದೆ ಎಂದು ಅಮ್ಮನನ್ನೂ ಹಳಿಯುತ್ತಿದ್ದಿರಿ.

ನನಗೆ ಆರ್ಟಿಸ್ಟ್ ಆಗಬೇಕೆಂಬ ಕನಸು. ಯಾವತ್ತೂ ನೀವು ನನ್ನ ಕನಸು ಏನೆಂದು ಕೇಳಲೇ ಇಲ್ಲ. ನೀವು ನಿಮ್ಮ ಪ್ರತಿಷ್ಠೆಗಾಗಿ ವೈದ್ಯಕೀಯ ಕೋರ್ಸ್ ಕೊಡಿಸಿದಿರಿ. ಅದನ್ನು ಮುಗಿಸಲಾರದೇ ಅರ್ಧಕ್ಕೆ ಬಿಟ್ಟು ಮನೆ ಸೇರಿದೆ. ಅಲ್ಲಿಂದ ಮುಂದೆ ನೀವು ನನ್ನೊಂದಿಗೆ ಮಾತನಾಡುವುದನ್ನೇ ನಿಲ್ಲಿಸಿದಿರಿ. ನಾನು ಗ್ರಾಫಿಕ್ ಕೋರ್ಸ್ ಮಾಡಿ ಕೆಲಸ ತೆಗೆದುಕೊಂಡಾಗಲೂ ನಿಮ್ಮಲ್ಲಿ ನನ್ನ ಬಗ್ಗೆ ಹೆಮ್ಮೆ ಇರಲಿಲ್ಲ. ನಿಮ್ಮ ಸ್ನೇಹಿತರ ಮುಂದೆ ನನ್ನನ್ನು ಅತ್ಯಂತ ನಿಷ್ಪ್ರಯೋಜಕನೆಂದು ಪರಿಚಯಿಸುತ್ತಿದ್ದಿರಿ.

ನನಗೆ ಕೆಲಸ ಸಿಗುವವವರೆಗೂ ನಾನೊಬ್ಬ ಮನುಷ್ಯನೆಂದು ಅನ್ನಿಸಲಾರದಷ್ಟು ಮಟ್ಟಿಗೆ ನಿಮ್ಮ ಮಾತುಗಳಿಂದ ರೋಸಿಹೋಗಿದ್ದೆ.

ಈಗ ನನಗೆ ಮದುವೆಯಾಗಿದೆ. ನಿಮ್ಮ ತರಹವೇ ನನ್ನ ಮಗ ಇದೇ ಆಗಬೇಕೆಂಬ ಕನಸು ಕೂಡಾ ಇದೆ. ಆದರೆ ಅವನು ಅದರ ವಿರುದ್ಧ ದಿಕ್ಕಿನಲ್ಲಿ ಸಾಗಿದ್ದಾನೆ ಕೋಪವಿದೆ ಆದರೂ ಅವನನ್ನು ಒಪ್ಪಿಕೊಳ್ಳುವ ಪ್ರಯತ್ನ ಮಾಡಿದ್ದೇನೆ.

'ಅಪ್ಪ' ಕಾಲ ಬದಲಾದಂತೆ ಬದಲಾಗುತ್ತಾ ಸಾಗಿದ್ದಾನೆ. ಒಪ್ಪುತ್ತೀರಾ?

11.Papa a girl's first hero

– **Meera**

A girl's first hero is always her father. As she grows up she observes how he behaves with other family members, how sensitive he is to the needs of the family and how supportive he is. So it was with my sweet papa. As a small girl, I realized very early that he was not like other men I had seen – my uncles, neighbors etc. No, he was not a big industrialist or a businessman or even a banker, he was just a husband to my mother and my loveable papa.

Very early into the marriage, papa realized my mother had more potential and zest for life than he. She was much more enterprising in whatever she did. And so, bringing an early twenties bride home, papa decided he would be supportive to whatever she wished in life. My mama wished to set up a tailoring shop in remote Puttur in DK, and that was fine for my dad despite having lived in Bangalore. He took up residence in Puttur, rented a shop, bought a few sewing machines, hired help and the business was on way.

I remember papa going to the shop each early morning to clear cow dung that cows dropped each night, cleaned the premises, brought the sewing machines out and the shop was ready by nine each AM. My mom would arrive post breakfast and start her work. As a young lady, she did attract a lot of male admirers, who papa would gamely ward off till the help arrived by 11 in the morning. With sure support to mom, he would rush back home, prepare a hasty snack and tea for her and rush back to enthuse her labored efforts. He would then return home to prepare her lunch and be back on time to feed her. Most days he would coax her to go home for a siesta. Some days she would resign to a short nap in the shop itself.

My dear Papa had the insight to understand my mother was the better breadwinner and he was all out to support her. During my entire life I have never come across a single occasion when he would not consult her before taking a decision, not a single time he would not listen to her better counsel. My mother never said anything to spite him for his not donning the role of the provider. My father never complained that he was the second citizen at home. The harmony that existed was an environment that provided me an insight into how men could be supportive and still be a hero.

Today he is not with me anymore, having reached the feet of Jesus, but I can never forget the immense lessons he taught me through demonstration about how a man could be the backbone of the family. Even if he did not the employment route. Papa, I pray you RIP.

12. ಅಪ್ರಾಯಮಾನವಾಗುವ ಈ ಅಪ್ಪಂದಿರು

— ಶ್ರೀಲತ ಕೆ ಎನ್.

ಪ್ರತಿದಿನವೂ ತನ್ನ 8 ವರ್ಷ ಪ್ರಾಯದ ಹೆಣ್ಣು ಮಗುವಿನ ಕೈಹಿಡಿದುಕೊಂಡು ಕಾಯಿಪಲ್ಲೆ ಕೊಂಡುಕೊಳ್ಳಲು ಬರುವ ಈ ಅಪ್ಪನಿಗೆ ಹೆಣ್ಣು, ಗಂಡು ಮಕ್ಕಳೆಂಬ ಬೇಧಭಾವವಿಲ್ಲ. "ಆಕೆ ತನಗಿಷ್ಟ ಬಂದಷ್ಟು ಓದಲಿ, ತಾನೇನಾಗಬೇಕೆಂದು ಬಯಸುತ್ತಾಳೋ ಅದು ಆಗಲಿ, ಹೆಣ್ಣು ಮಗುವೆಂಬ ಬೇಧ ಭಾವನೆಯಿಂದ ನಾವಾಕೆಯನ್ನು ಬೆಳೆಸುವುದಿಲ್ಲವೆನ್ನುತ್ತಾರೆ" ರಾಜ್ಯ ರಸ್ಥೆ ಸಾರಿಗೆ ಸಂಸ್ಥೆಯಲ್ಲಿ ಉದ್ಯೋಗಿಯಾಗಿರುವ ಈ ಅಪ್ಪ.

ಇನ್ನೊಬ್ಬ ಅಪ್ಪ, ಹೆಣ್ಣು ಮಗುವನ್ನು ಹೆಚ್ಚಾಗಿ ಇಷ್ಟಪಡುತ್ತಿದ್ದ. ಆತ ತನಗೆ ಮಕ್ಕಳಾಗದಿರುವಾಗ ಹೆಣ್ಣು ಮಗುವೊಂದನ್ನು ದತ್ತು ಪಡೆದ. ಆ ಮಗು ಕಕ್ಕಸ್ಸು, ಉಚ್ಚೆ ಮಾಡಿದಾಗ ಹೆಂಡತಿಯನ್ನಾಗಲಿ, ಕೆಲಸದಾಕೆಯನ್ನಾಗಲಿ ಕರೆಯದೆ ಮಲ ಮೂತ್ರಗಳೆಲ್ಲವನ್ನೂ ತಾನೇ ತೆಗೆದು ಶುಭ್ರಗೊಳಿಸುತ್ತಿದ್ದ. ಮಗುವಿನ ಸ್ನಾನ, ತಲೆ ಬಾಚುವುದು, ಯೂನಿಫಾರಂ ತೊಡಿಸುವುದು, ಶಾಲೆಗೆ ಬಿಟ್ಟುಬರುವುದು ಇತ್ಯಾದಿ ಜವಾಬ್ದಾರಿಗಳೆಲ್ಲವನ್ನೂ ನಿರ್ವಹಿಸುತ್ತಿದ್ದ. ಮಗುವನ್ನು ನೋಡಿಕೊಳ್ಳುವ ಭರದಲ್ಲಿ ಆತ ಮಗುವಿನ ಸಿಂಬಳ ತೆಗೆಯುವುದು, ಮಲಮೂತ್ರ ವಿಸರ್ಜನೆಯಿಂದ ಒದ್ದೆಯಾಗುವ ಮಗುವಿನ ದೇಹದ ಭಾಗಗಳನ್ನು ಒರೆಸುವುದು, ಕಾಲಿನ ಧೂಳೊರೆಸುವುದು ಇತ್ಯಾದಿಗಳಿಗಾಗಿ ಆತ ತಾನುಟ್ಟ ಲುಂಗಿಯ ತುದಿಯನ್ನು ಬಳಸುತ್ತಾ, ಸಹ್ಯ ಅಸಹ್ಯ ಭಾವನೆಗಳನ್ನು ಮೀರಿ ನಿಲ್ಲುತ್ತಿದ್ದ.

ಈ ಅಪ್ಪ ವಿದೇಶದಲ್ಲಿರುವ ತನ್ನ ಹೆಂಡತಿಯಿಂದ ದೂರವಿದ್ದಾನೆ. ಮಗಳನ್ನು ತನ್ನೊಂದಿಗಿರಿಸಿಕೊಂಡಿದ್ದಾನೆ. ಆಕೆ ಮೈನೆರೆಯುವ ದಿನಗಳು ಸಮೀಪಿಸುತ್ತಿರುವುದನ್ನು ನೆನೆದುಕೊಳ್ಳುವ ಅಪ್ಪನಿಗೀಗ ಚಿಂತೆ ಕಾಡಲಾರಂಬಿಸಿದೆ. ಇಂತಹ ದಿನಗಳಲ್ಲಿ ವಹಿಸಬೇಕಾದ ವಯಕ್ತಿಕ ಸ್ವಚ್ಚತೆ, ಮುನ್ನೆಚ್ಚರಿಕೆಯ ಕ್ರಮಗಳು, ದೇಹದಲ್ಲಾಗುವ ಬದಲಾವಣೆಗಳ ಬಗ್ಗೆ ಅವಳಿಗೆ ತಿಳಿ ಹೇಳುವವರಾರು? ಅವಳ ಆರೈಕೆ, ಪಾಲನೆ, ಪೋಷಣೆಯನ್ನು ನಿರ್ವಹಿಸುವವರಾರು? ತಾಯಿ ಬಳಿಯಲ್ಲಿಲ್ಲದ ಕೊರತೆಯನ್ನು ನೀಗಿಸುವುದು ಹೇಗೆ?

ಇನ್ನು ಕೆಲವು ಅಪ್ಪಂದಿರಿದ್ದಾರೆ. ತಮ್ಮ ಕಛೇರಿಯ ಕೆಲಸದ ವೇಳೆ ಮುಗಿದಿದ್ದರೂ ಮನೆಗೆ ತೆರಳದಿರುವ ತಮ್ಮ ಸಹೋದ್ಯೋಗಿ ಮಹಿಳೆಯರನ್ನು ಎಚ್ಚರಿಸುತ್ತಿರುತ್ತಾರೆ. ಈ ಮಹಿಳೆಯರು ತಮ್ಮ ಒಬ್ಬಂಟಿ ಹೆಣ್ಣು ಮಕ್ಕಳನ್ನು ಮನೆಯಲ್ಲಿ ಬಿಟ್ಟು ಬಂದಿರುವ ಬಗ್ಗೆ ಇವರ ಆತಂಕ, ಕಾಳಜಿ. ಹೊಸತಾಗಿ ಕಛೇರಿಗೆ ವರ್ಗಾವಣೆಯಾಗಿ ಬರುವ ಮಹಿಳೆಯರ ಹೆಣ್ಣು ಮಕ್ಕಳಿಗೆ ಹೊಸ ಊರಿನಲ್ಲಿ ಆಪ್ತರು, ಸ್ನೇಹಿತೆಯರು, ಇರುವುದಿಲ್ಲ. ಇಂತಹಾ ಸಂಧರ್ಭಗಳಲ್ಲಿ ಕಛೇರಿ ಮುಗಿಸಿ ಮನೆ ಸೇರಿ ತಮ್ಮ ಹೆಣ್ಣು ಮಗಳ ಬಗ್ಗೆ ಕಾಳಜಿ ವಹಿಸುವಂತೆ ಎಚ್ಚರಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಅಪ್ಪನಾಗಲಿ, ಮತ್ತೊಬ್ಬರಾಗಲಿ ಈ ಹೆಣ್ಣು ಮಕ್ಕಳ ಬಳಿಯಲ್ಲಿಲ್ಲದೆ, ದಿನವಿಡೀ ಒಬ್ಬಂಟಿಯಾಗಿ ಮನೆಯಲ್ಲಿರುವ ಪರಿಸ್ಥಿತಿ ಇರುತ್ತದೆ.

ತಮ್ಮ ಮನೆಯಲ್ಲಿರುವ ಹೆಣ್ಣು ಮಕ್ಕಳ ಬಗ್ಗೆ ಮಾತ್ರವಲ್ಲ, ತಮ್ಮ ಸಹೋದ್ಯೋಗಿಗಳು, ಸ್ನೇಹಿತರ ಹೆಣ್ಣು ಮಕ್ಕಳ ಬಗ್ಗೆಯೂ ಕಾಳಜಿ, ಆಸ್ಥೆ ವಹಿಸುವ ಈ ಅಪ್ಪಂದಿರ ಪ್ರೀತಿ, ಮಾನವೀಯ ಸ್ಪಂದನೆ ಶ್ಲಾಘನೀಯ. ಪುರುಷ ಹೃದಯದಲ್ಲಿ ನೆಲೆಗೊಂಡಿರುವ ಪ್ರೀತಿ, ವಾತ್ಸಲ್ಯ, ಮಮತೆ ಎಲ್ಲವನ್ನೂ ಈ ಅಪ್ಪಂದಿರ ಪಾತ್ರಗಳು ಅಭಿವ್ಯಕ್ತಪಡಿಸುತ್ತವೆ. ಅಪ್ಪ ಮಕ್ಕಳಿಗೆ ರಕ್ಷಣೆಯ, ಭದ್ರತೆಯ ಪ್ರತೀಕವಾಗಿ ಬಿಂಬಿಸಲ್ಪಡುತ್ತಿದ್ದ. ಆದರೆ ಈ ಅಪ್ಪಂದಿರು ತಾಯಿ ಮಡಿಲಿನ ಪ್ರೀತಿ, ಕಾಳಜಿ, ಮಮಕಾರವನ್ನು ನೀಡಬಲ್ಲಷ್ಟೇ ಶಕ್ತರು. ಅಪ್ಪನೆಂದರೆ ಗಟ್ಟಿ, ಭಾವನೆಗಳನ್ನು ಅದುಮಿಡಬಲ್ಲ ಶಕ್ತಿವಂತನಾಗಿ, ರಕ್ಷಣೆ, ಭದ್ರತೆಯ ಪ್ರತೀಕವಾಗಿ ಬಿಂಬಿಸಲ್ಪಡುತ್ತಿದ್ದ. ತಾಯಿಯಲ್ಲಿ ಕಂಡುಬರುವ ಎಲ್ಲಾ ಭಾವೋದ್ರೇಕಗಳೂ ತಂದೆಯಲ್ಲೂ ಇವೆ. ಆದರೆ ಅವುಗಳನ್ನು ಅಭಿವ್ಯಕ್ತಿ ಪಡಿಸಲಾರದ ಸಾಮಾಜಿಕ ಕಟ್ಟುಪಾಡುಗಳಿಗೆ ಸಿಕ್ಕಿರುವ ಅಪ್ಪನ ಮಾತ್ರ ಹೃದಯ ಸಮಾಜಕ್ಕೆ ಗೋಚರಿಸುವುದಿಲ್ಲ. ಆದರೀಗ ಬದಲಾಗುತ್ತಿರುವ ಸಾಮಾಜಿಕ ಸನ್ನಿವೇಶ, ಪಾತ್ರಗಳ ಸಂದರ್ಭದಲ್ಲಿ ಅಪ್ಪನ ಬಚ್ಚಿಟ್ಟ ಮುಖ ಗೋಚರಿಸುತ್ತದೆ. ಈ ಮುಖ ಹೊತ್ತು ಜವಾಬ್ದಾರಿಗಳನ್ನು ನಿರ್ವಹಿಸುವ ಅಪ್ಪಂದಿರು ನಮಗಿಂದು ಬೇಕಾಗಿದ್ದಾರೆ. ಗಂಡು ಹೆಣ್ಣಿನಲ್ಲಿ ಕೇವಲ ದೈಹಿಕ ವ್ಯತ್ಯಾಸಗಳು ಮಾತ್ರ ಆ ವ್ಯತ್ಯಾಸಕ್ಕೆ ಅನುಗುಣವಾಗಿ ಅವರ ಪಾತ್ರಗಳು ಭಿನ್ನವಾಗಬೇಕೇ ಹೊರತು ಸಾಮಾಜಿಕ ಕಟ್ಟುಪಾಡುಗಳ ನೆಲೆಯಲ್ಲಿ

ಜವಾಬ್ದಾರಿಗಳ ನಿರ್ವಹಣೆಯಲ್ಲಿ ಸುಖವಿಲ್ಲ. ಇದು ಕುಟುಂಬ, ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತವೆ. ಬದಲಾಗಿ ಅಪ್ಯಾಯಮಾನವಾಗುವ ಅಪ್ಪಂದಿರು ನಮಗಿಂದು ಬೇಕಾಗಿದ್ದಾರೆ. ಸಮಾಜದ ಸ್ವಾಸ್ಥ್ಯ ಇಲ್ಲಿ ಅಡಗಿದೆ.

13. ಅಪ್ಪಂದಿರ ದಿನ

- ಬಿ. ರಾಮಚಂದ್ರ ಭಟ್.

ನಮ್ಮಲ್ಲಿ ''ಅಪ್ಪಂದಿರ ದಿನ'' ಅಂತ ವಿಶಿಷ್ಟವಾಗಿ ಏನೂ ಇಲ್ಲ. ಏಕೆಂದರೆ, ಇರುವುದು ಒಬ್ಬನೇ ಅಪ್ಪ. ಬಹುಶಃ ಆಂಗ್ಲಭಾಷೆಯ ಪ್ರಭಾವವೋ ಏನೋ....? ಕನ್ನಡಕ್ಕಾಗುವಾಗ ಬಹುವಚನ ಹೋಗಿ ದ್ವಿವಚನವಾಯಿತು. ಪ್ರಾದೇಶಿಕ ಭಾಷೆಯ ಚಂದ ಇರುವುದೇ ಅಲ್ಲಿ. ಅರ್ಥ ಆಗದೇ ಇದ್ದರೆ ಎಡವಟ್ಟಾಗುವುದು ಇಂಥಲ್ಲಿಯೇ. ಹೇಗೇ ಇರಲಿ, ನಮ್ಮನಿಮ್ಮಲ್ಲಿ ಅಪ್ಪನ ದಿನ ಅಂದರೆ ಅಪ್ಪನ "ವಾರ್ಷಿಕ". ಅದಕ್ಕಿಂತ ಹೆಚ್ಚಿಗೆ ಏನೂ ಇಲ್ಲ. "ಪಿಂಡಪ್ರಧಾನ" ಅಂತಲೂ ಕರೆಯುತ್ತಾರೆ. ಆ ದಿನ ಅಪ್ಪ, ಅಪ್ಪನ ಅಪ್ಪ ಹಾಗೂ ಅಪ್ಪನ ಅಣ್ಣ - ಮುಂತಾದ ಹಿರಿಯ ತಲೆಮಾರಿಗೆ ಅವರ ಮಕ್ಕಳು "ತಿಲೋದಕ" ಬಿಡುತ್ತಾರೆ. ಅದು ಪಿತೃ ಹಾಗು ಪಿತೃಸ್ಥಾನದಲ್ಲಿರುವ ಅವರೆಲ್ಲರಿಗೂ ನಾವು ಚಿರಋಣಿಯಾಗಿದ್ದೇವೆ ಎನ್ನುವುದರ ಸಂಕೇತವಿರಬಹುದೋ ಏನೋ...? ಶ್ರದ್ಧೆಯಿಂದ ಮಾಡುವ ಕಾರಣಕ್ಕೆ ಇದನ್ನೇ ಶ್ರಾದ್ಧ ಎಂತಲೂ ಕರೆಯುವುದು ವಾಡಿಕೆ. ದೇವರಿಗೆ ಹವಿಸ್ಸು ಇದ್ದಹಾಗೆ. ಆ ದಿನ ನಮ್ಮನ್ನಗಲಿದ "ಹಿರಿಯರು ನಮ್ಮಿಂದ ಭೋಜನ ಸ್ವೀಕರಿಸಿದ್ದಾರೆ" ಎಂದು ನಾವು ತೃಪ್ತರಾಗುತ್ತೇವೆ. ವಯಸ್ಸಾದ ಹಿರಿಯರನ್ನು ನಿತ್ಯ ಸೇವೆ ಮಾಡುವುದು ಮಕ್ಕಳ ಆದ್ಯ ಕರ್ತವ್ಯ ಎನ್ನುವ ಸಂದೇಶವನ್ನು ನಮ್ಮ ಪೂರ್ವಜರು ನಮಗೆ ನೆನಪಿಸುವುದು ಹೀಗೆ.

ನಮ್ಮಲ್ಲಿ ಅಪ್ಪಂದಿರ ದಿನ ಎನ್ನುವ ಪ್ರತ್ಯೇಕ ತಾತ್ವಿಕ ಚಿಂತನೆಯೇ ಇಲ್ಲ. "ಪಿತೃದೇವೋ ಭವಃ" ಎಂಬಲ್ಲಿ ನಾವು ತಂದೆಗೆ ದೈವದ ಸ್ಥಾನವನ್ನು ಕಲ್ಪಿಸಿದ್ದೇವೆ. ತಂದೆಯ ಸೇವೆ ಮಾಡುವುದು ಮಕ್ಕಳ ಪಾಲಿಗೆ ಕರ್ತವ್ಯ; ಅದು ನಿರಂತರ. ಎಷ್ಟೇ ಕಷ್ಟ ಬಂದರೂ, ಮಕ್ಕಳನ್ನು " ತಾವು ಅರೆಹೊಟ್ಟೆ ಉಂಡಾದರೂ" ಸಾಕಿ ಸಲಹುವ ಆ ಜೀವಕ್ಕೆ ವರ್ಷದಲ್ಲೊಂದು ದಿನ " ಇದು ನಿನ್ನ ದಿನ" ಅಂದರೆ ಸಾಕೇ? ಉಳಿದದ್ದೆಲ್ಲಾ ನಮ್ಮ ದಿನವಾದರೆ; ಅಪ್ಪನಿಗೆ "ಬದುಕು" ಬೇಕೇ? "ಅಪ್ಪ" - ಆ ಶಬ್ದದ ತೂಕ, ಆಳ, ಎತ್ತರ, ವೈಶಾಲ್ಯದ ಅರಿವನ್ನು ನಮ್ಮ ಮಕ್ಕಳು, ನಾವು ಬದುಕುವ ಬದುಕಿಂದ ಕಲಿಯಬೇಕು. ಇಲ್ಲದಿದ್ದರೆ ಪಾಶ್ಚಾತ್ಯ ಪದ್ಧತಿಯ ಒಂದು ಕಾಟಾಚಾರದ ಹಬ್ಬವಾದೀತು.

14. ಸ್ಪಂದನ

- ಶೌರೀಶ್ ಕುದ್ಕುಳಿ

ರಂಗರಾಯರು ಶ್ರೀಮಂತರಲ್ಲದಿದ್ದರೂ ಮಧ್ಯಮ ಕುಟುಂಬದ ಸ್ವಾಭಿಮಾನದ ವ್ಯಕ್ತಿ. ತನ್ನ ಮನಸ್ಸಿನಲ್ಲಿ ಮೂಡಿದಂತಹ ಆಲೋಚನೆಗಳನ್ನು ನಿರಾಳವಾಗಿ ಕೃತಿಗೆ ಇಳಿಸತಕ್ಕಂತಹ ಧೈರ್ಯಶಾಲಿ ಹಾಗೂ ಅವರು ಊರಲೆಲ್ಲಾ ಬಹು ಪ್ರಚಾರವಂತರಾಗಿದ್ದರು. ಅಲ್ಲದೇ ನೀತಿನಿಯಮಗಳನ್ನು ಅಚ್ಚುಕಟ್ಟಾಗಿ ಪಾಲಿಸುತ್ತಿದ್ದರು ಹಾಗೂ ಅವುಗಳನ್ನು ಪಾಲಿಸಲು ಮತ್ತೊಬ್ಬರಿಗೆ ನಿರ್ದೇಶನ ನೀಡುತ್ತಿದ್ದರು. ಇದು ಕೆಲವೊಮ್ಮೆ ಮನಸ್ತಾಪಕ್ಕೆ ದಾರಿಮಾಡಿಕೊಟ್ಟು 'ಶಿಸ್ತಿನ ಮನುಷ್ಯ'ನೆಂಬ ಅಪಹಾಸ್ಯಕ್ಕೆ ಈಡಾಗುತ್ತಿದ್ದರು. ಧನಿಕರಿಗಿಂತಲೂ ಊರಿನ ಕೆಳವರ್ಗವನ್ನು ಅತಿಯಾಗಿ ಹಚ್ಚಿಕೊಂಡಿದ್ದ ರಾಯರು ತಮ್ಮ ಜೀವನದುದ್ದಕ್ಕೂ ಅತೀವ ಕಷ್ಟಗಳನ್ನು ಎದುರಿಸಬೇಕಾಯಿತು. ಸಣ್ಣ ಪುಟ್ಟ ತಪ್ಪುಗಳನ್ನು ಹುಡುಕಿ ಸಂಕೀರ್ಣತೆಯಿಂದ ಕೂಡಿದ

ಸಮಾಜವನ್ನು ಸರಿಪಡಿಸಲು ಪ್ರಯತ್ನಿಸಿದ ಅವರಿಗೆ ನೋವು ದು:ಖಗಳ ಸರಮಾಲೆಗಳೇ ಸಾಲು ಸಾಲಾಗಿ ಕಂಡುಬಂದವು. ಆದರೆ ಇದ್ಯಾವುದಕ್ಕೂ ಜಗ್ಗದ ರಾಯರು ತಮ್ಮ ದೈನಂದಿನ ಕೆಲಸಗಳನ್ನು ಮಾಡುತ್ತಲೇ ಬಂದಿದ್ದರು.

ಇಂತಹ ವ್ಯಕ್ತಿತ್ವವುಳ್ಳ ರಾಯರದ್ದು ತುಂಬು ಸಂಸಾರ. ಆರು ಮಕ್ಕಳ ಈ ಸಂಸಾರದಲ್ಲಿ ಅನೇಕ ಏಳುಬೀಳುಗಳು ಸಂಸಾರದ ನಿದ್ದೆಗೆಡಿಸುತ್ತಲೇ ಇದ್ದವು. ಎಲ್ಲಾ ಮಕ್ಕಳಿಗೂ ತಕ್ಕಮಟ್ಟಿಗೆ ವಿದ್ಯಾಭ್ಯಾಸವನ್ನು ನೀಡುತ್ತಾ ಬಂದ ರಾಯರು ಸ್ವ–ಉದ್ಯೋಗದ ಕಡೆಗೆ ಮಕ್ಕಳನ್ನು ಕೊಂಡೊಯ್ಯಲು ಪ್ರಯತ್ನಿಸುತ್ತಿದ್ದರು. ಕೆಲವರು ಅದನ್ನು ವಿರೋಧಿಸಿದರೆ ಇನ್ನುಳಿದವರು ಅದನ್ನು ಸ್ವಾಗತಿಸುತ್ತಾ ಬೆಳೆದರು. ರಾಯರ ಈ ರೀತಿಯ ಸ್ವ–ಉದ್ಯೋಗಗಳು ದಿನೇದಿನೇ ತನ್ನ ಕೀರ್ತಿಯನ್ನು ಹೆಚ್ಚಿಸಿಕೊಳ್ಳುತ್ತಾ ಹೋಯಿತು. ದಿನನಿತ್ಯದ ಕೆಲಸಗಳು, ತೋಟದ ಕೆಲಸಗಳು ಹಾಗೂ ಲಾಭದಾಯಕ ವಾಣಿಜ್ಯ ಬೆಳೆಗಳ ಕೆಲಸಗಳನ್ನು ತಾವೇ ತಮ್ಮ ಕುಟುಂಬದೊಂದಿಗೆ ನಿರ್ವಹಿಸುತ್ತಾ ಬಂದ ರಾಯರ ಕುಟುಂಬ ಹೊಸ ದಿಸೆಯತ್ತ ಹೆಜ್ಜೆ ಹಾಕುತ್ತಲಿತ್ತು. ಆದರೆ ಅದೇ ಊರಿನ ಕೆಲವು ಗೊಡ್ಡು ಮನೆತನಗಳು ಮತ್ಸರದಿಂದ ಮೈಕೊಡವಿಕೊಳ್ಳಲು ಪ್ರಯತ್ನಿಸತೊಡಗಿದರು. ಆದಾಗ್ಯೂ ಇದ್ಯಾವುಗಳೂ ರಾಯರ ಮೇಲೆ ಪ್ರಭಾವವನ್ನು ಬೀರದೆಯೇ ಸ್ಫೂರ್ತಿಯಾಗಿ ನಿಂತುಕೊಂಡವು.

ರಾಯರಿಗೆ ತಮ್ಮ ಸಂಬಂಧಿಕರೆಂದರೆ ಅಷ್ಟಕಷ್ಟೇ. ಹಾಗೇಯೇ ಸಂಬಂಧಿಕರಿಗೂ ರಾಯರೆಂದರೆ ಏನೋ ಅಸಮಾಧಾನ. ಹೀಗೆ ಒಂದು ದಿನ ರಾಯರು ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದರು. ಅದುವೇ ತೋಟದ ಮೆಟ್ಟಿಲುಗಳ ರಚನೆ. ಇದರಿಂದ ಮನೆಮಂದಿಗೆಲ್ಲಾ ಸಂತೋಷದಾಯಕವಾದ ಓಡಾಟದ ಸಂಭ್ರಮವಾದರೆ, ಪ್ರತಿ ದಿನ ರಾಯರ ಮನೆ ಮುಂಭಾಗದಿಂದ ತೆರಳುತ್ತಿದ್ದ ಸಂಬಂಧಿಕರಿಗೆ ಹೊಟ್ಟೆಯಲ್ಲಿ ಏನೋ ತಳಮಳ. ಇವರು ಏನೇನೋ ಸಬೂಬುಗಳನ್ನು ಹೇಳುತ್ತಾ ತೋಟದ ಮೆಟ್ಟಿಲುಗಳ ರಚನೆಗೆ ಅಡ್ಡಗಾಲು ಹಾಕುತ್ತಿದ್ದರು. ಆದರೆ ರಾಯರ ಉದ್ದೇಶವೇ ಬೇರೆಯಾಗಿತ್ತು. ತಾನು ಮಾಡುವ ಯಾವುದೇ ಕೆಲಸವನ್ನು ತನ್ನ ಬಂಧು ಹಾಗೂ ಊರವರಲ್ಲಿ ಚರ್ಚಿಸುವ ರಾಯರು ಇದರ ಪ್ರಸ್ತಾಪವನ್ನು ಮುಂದಾಗಿ ಬಂಧುಗಳಲ್ಲಿರಿಸಿದರು. ಆದರೆ ಅವರ ಸಲಹೆಗಳೇ ಬೇರೆಯಾಗಿತ್ತು.

ಸುಮಾರು 41 ಮೆಟ್ಟಿಲುಗಳನ್ನು ಮನೆ ಮತ್ತು ತೋಟಕ್ಕೆ ಸಂಪರ್ಕವಾಗಿ ರಚನೆ ಮಾಡಬೇಕೆಂದು ರಾಯರು ಯೋಜನೆಯೊಂದನ್ನು ಹಾಕಿದ್ದರು ಮತ್ತು ಈ ಯೋಜನೆಯು ಹಂತಹಂತವಾಗಿ ನಡೆಯಬೇಕೆಂಬುದೇ ಅವರ ನಿರ್ಧಾರವಾಗಿತ್ತು. ಆದರೆ ಅವರ ಈ ದೃಢ ನಿರ್ಧಾರ ಹಲವಾರು ಅಡೆತಡೆಗಳನ್ನು ಮೀರಿ ಪ್ರಾರಂಭದ ಹಂತಕ್ಕೆ ಬಂದು ನಿಂತಿತ್ತು. ಈ ನಡುವೆ ಮೆಟ್ಟಿಲುಗಳ ರಚನೆಗೆ ರಾಯರಿಗೆ ಆರ್ಥಿಕ ಅಡಚಣೆಯು ಕಂಡು ಬರತೊಡಗಿತು. ಏಕೆಂದರೆ ರಾಯರು ಕಲಾರಸಿಕರು ಮತ್ತು ನೂರಕ್ಕೆ ನೂರರಷ್ಟು ಮೌಲ್ಯಗಳಿಗೆ ಬೆಲೆಕೊಡುವಂತಹವರು. ಅಲ್ಲದೇ ತನ್ನ ಮನದಾಳದ ಆಸೆ–ಅಕಾಂಕ್ಷೆಗಳಿಗೆ ಯಾವತ್ತೂ ಚ್ಯುತಿಬಾರದಂತೆ, ಆರ್ಥಿಕ ಅಡಚಣೆಯನ್ನು ಲೆಕ್ಕಿಸದೆಯೇ ಕೃತಿಗೆ ಇಳಿಸುತ್ತಿದ್ದರು. ಈ ರೀತಿ ಮೆಟ್ಟಿಲುಗಳ ರಚನಾ ಪ್ರಕ್ರಿಯೆ ನಡೆಯುತ್ತಾ ಇದ್ದ ಹಾಗೆ ಅನೇಕ ವ್ಯಕ್ತಿಗಳು, ಬಂಧುಗಳು ಇದರ ಬಗ್ಗೆ ಮಾತನಾಡಲು ಮತ್ತು ಬಂದು ನೋಡಿಕೊಂಡು ಹೋಗಲು ಪ್ರಾರಂಭಿಸಿದರು. ಬಂದವರಲ್ಲೆಲ್ಲಾ ಮತ್ಸರದ ಗೂಡೇ ಮನೆಮಾಡಿತ್ತಾದರೂ, ಹರಿಕೆ ಸಂದಾಯವೆಂಬಂತೆ ಚೆನ್ನಾಗಿ ಮಾತನಾಡತೊಡಗಿದರು. ಆದರೆ ರಾಯರು ಇದರತ್ತ ಗಮನಕೊಡಲೇ ಇಲ್ಲ. ಹಲವು ದಿನಗಳ ಸತತ ಪ್ರಯತ್ನದಿಂದಾಗಿ ಮೆಟ್ಟಿಲುಗಳು ಮಣ್ಣು ಮತ್ತು ಕಲ್ಲಿನಿಂದ ರೂಪುಗೊಂಡು ಸುಂದರವಾಗಿ ಕಾಣತೊಡಗಿದವು.

ರಾಯರ ಕನಸುಗಳು ಇಲ್ಲಿಗೇ ನಿಂತಿಲ್ಲ. ನಿಧಾನವಾಗಿ ಆ ಮೆಟ್ಟಿಲುಗಳನ್ನು ಕಾಂಕ್ರೀಟೀಕರಣಗೊಳಿಸಲು ಚಿಂತಿಸುತ್ತಿದ್ದರು. ಅಲ್ಲದೇ ಮೆಟ್ಟಿಲುಗಳ ಎರಡೂ ಬದಿಗಳಲ್ಲಿ ಅಲಂಕಾರಿಕ ರೀತಿಯಲ್ಲಿ ಗೋಡೆಗಳ ನಿರ್ಮಾಣ ಮತ್ತು ಫಲಪುಷ್ಪಗಳಿಗೋಸ್ಕರ ಗಿಡಗಳ ಬೆಳೆಯುವಿಕೆಗೆ ಕೈಹಾಕತೊಡಗಿದರು. ಅಂತೂ ಕೊನೆಗೂ ಈ ಕೆಲಸಗಳೆಲ್ಲವೂ ಕೈಗೂಡಿ, ರಾಯರು ಸಂತೋಷದಿಂದ ಮೆಟ್ಟಿಲುಗಳ ಎರಡೂ ಬದಿಗಳಲ್ಲಿನ ಕಟ್ಟೆಗಳಲ್ಲಿ ಕುಳಿತು ಆನಂದಿಸುತ್ತಿದ್ದರು. ಆದರೆ ಈ ಆನಂದ ಬಹುಕಾಲ ಉಳಿಯಲೇ ಇಲ್ಲ!

ಈ ಮೆಟ್ಟಿಲುಗಳೇ ರಾಯರಲ್ಲಿ ಅನೇಕ ಮಂದಿಗೆ ಮನಸ್ತಾಪ ಉಂಟುಮಾಡಬಹುದೆಂದು ಅವರು ಊಹಿಸಿರಲಿಲ್ಲ. ರಜಾಕಾಲದಲ್ಲಿ ಮನೆಗೆ ಬಂದ ಮಕ್ಕಳಿಗಂತೂ ಮೇಲಿನಿಂದ ಕೆಳಕ್ಕೆ ಜಿಗಿಯುತ್ತಾ ಆ ಮೆಟ್ಟಿಲುಗಳು ಸಂತೋಷ ನೀಡಿದರೆ, ಹಿರಿಯರಿಗೆ ಮತ್ಸರದ ಮರವಾಗಿ ಕಾಣಿಸತೊಡಗಿತು.

ಇದ್ದಕಿದ್ದ ಹಾಗೆ ಒಂದು ದಿನ ಆ ಮೆಟ್ಟಿಲುಗಳನ್ನೇರಿ ಬರುತ್ತಿದ್ದ ರಮೇಶ್ ಅಕಸ್ಮಾತ್ತಾಗಿ ಕಾಲುಜಾರಿ ಬಿದ್ದು ಬಿಟ್ಟನು. ಇದು ಕೇವಲ ನೆಪವಾಗಿತ್ತು. ಕೂಡಲೇ ಆತನಿಗೆ ಪ್ರಥಮ ಚಿಕಿತ್ಸೆಯನ್ನು ಮಾಡಿ ಆಸ್ಪತ್ರೆಗೆ ಸೇರಿಸಲಾಯಿತು. ವೈದ್ಯರು ಆತನ ಕಾಲಿನ ಮತ್ತು ಕೈಯ ಮೂಳೆಗಳು ಮುರಿದಿವೆ ಎಂದು ತಿಳಿಸಿದಾಗ ಸಂಬಂಧಿಕರಿಗೆ ಆಕಾಶವೇ ಕಳಚಿಬಿದ್ದಂತಾಯಿತು. ರಾಯರು ಸಾಕಷ್ಟು ಧನಸಹಾಯವನ್ನು ಆತನಿಗೆ ಮಾಡುತ್ತಾ ಹೋದರೂ, ದಿನೇ ದಿನೇ ಕಾಯಿಲೆ ಉಲ್ಬಣಿಸುತ್ತಾ ಹೋಯಿತು. ನಿಧಾನವಾಗಿ ಸಂಬಂಧಿಕರೊಡನೆ ಊರಿನವರ ಕೋಪವೂ ರಾಯರ ಮೇಲೆ ತಿರುಗಿತು.

ಇಂದಲ್ಲ ನಾಳೆ ರಾಯರ ಅಪಮಾನಕ್ಕೆ ಊರವರು ಮನಸ್ಸಿನೊಳಗೆ ಕತ್ತಿ ಮಸೆಯುತ್ತಿದ್ದರು. ಆದರೆ ರಾಯರ ಪುಣ್ಯವೋ ತಿಳಿಯದು, ಆಸ್ಪತ್ರೆಯಲಿದ್ದ ರಮೇಶನು ನಿಧಾನವಾಗಿ ಚೇತರಿಸುತ್ತಾ ಆಸೆಗಣ್ಣನ್ನು ತೆರೆಯುತ್ತಿದ್ದನು. ರಮೇಶ ಅತಿ ಬಡವನಾದ್ದರಿಂದ ಆತನಿಗೆ ಹಣದ ಅಡಚಣೆ ಕಂಡುಬಂತು. ಅಲ್ಲದೇ ಆತನೋರ್ವನ ದುಡಿತದಿಂದ ಆ ಕುಟುಂಬವೇ ಜೀವನ ಸಾಗಿಸಬೇಕಾಗಿತ್ತು. ಆದರೆ ಆತ ರಾಯರ ನಿಷ್ಠ ಬಂಟನಾಗಿದ್ದು ಹಲವಾರು ಬಾರಿ ಈ ಹಿಂದೆ ರಾಯರು ಆತನಿಗೆ ಸಹಾಯ ಮಾಡಿದ್ದರು.

ಹೀಗೆ ಗುಣಮುಖನಾಗಿ ಮನೆ ಸೇರಿದ್ದ ರಮೇಶನಿಗೆ ಒಂದು ವರುಷದ ತನಕ ಕೆಲಸ ಮಾಡಬಾರದ್ದೆಂದು ವೈದ್ಯರು ತಾಕೀತು ಮಾಡಿದ್ದರು. ಆದರೆ ತನ್ನ ಕುಟುಂಬ ಕಣ್ಣಿನಲ್ಲಿ ಕೈ ತೊಳೆಯುವುದನ್ನು ನೋಡಲು ರಮೇಶನಿಗೆ ಆಗಲಿಲ್ಲ. ಆದುದರಿಂದ ಆತ ಕೆಲಸಕ್ಕೆ ಹೋಗಲೇ ಬೇಕಾಯಿತು. ವೈದ್ಯರ ಪೂರ್ವಾನುಮತಿಯಿಲ್ಲದೇ ಕಠಿಣ ಕೆಲಸ ಮಾಡಿದ್ದರಿಂದ ಅದು ತೀವ್ರವಾಗಿ ರಮೇಶನಿಗೆ ಪರಿಣಾಮ ಬೀರಿ ಮತ್ತೆ ಪುನಃ ಆತನನ್ನು ಆಸ್ಪತ್ರೆಗೆ ಸೇರಿಸುವಂತೆ ಮಾಡಿತು.

ಇದು ರಮೇಶನ ಜೀವನದ ಕೊನೇಯ ಕ್ಷಣಗಳಾಗಿ ಮಾರ್ಪಡಬಹುದೆಂದು ರಾಯರು ಊಹಿಸಿರಲಿಲ್ಲ. ರಮೇಶನ ಕಾಯಿಲೆ ವಾಸಿಯಾಗದೇ ಅದು ದಿನೇ ದಿನೇ ಉಲ್ಬಣಿಸುತ್ತಾ ಹೋದ ಹಾಗೆ ರಾಯರಿಗೆ ವಿಧಿಯು ಕೆಟ್ಟದಾಗಿ ಗೋಚರಿಸತೊಡಗಿತು. ಒಂದು ಬೆಳಗ್ಗಿನ ಜಾವದಲ್ಲಿ ರಮೇಶನು ಇಹಲೋಕವನ್ನು ತ್ಯಜಿಸಿಯೇ ಬಿಟ್ಟನು. ಈಗ ಊರವರ ಸಹಿತ ಅನೇಕ ಮಂದಿ ಇದರಲ್ಲಿ ರಾಯರನ್ನು ಮುಖ್ಯ ಪಾತ್ರಧಾರಿಯನ್ನಾಗಿ ಮಾಡಿ, ರಮೇಶನ ಕಾರ್ಯಕೆಲಸಗಳನ್ನೆಲ್ಲಾ ಮುಗಿಸಿ ರಾಯರ ವಿರುದ್ಧ ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಕೇಸೊಂದನ್ನು ಹಾಕಿದರು. ಇದಕ್ಕೆಲ್ಲಾ ಕಾರಣ ಅನಾಗರಿಕರ ನಡುವೆ ನಾಗರಿಕನೋರ್ವನ ಸಾಧನೆ, ನಿಷ್ಠೆಗಳು ಎಂಬುದನ್ನು ಅರಿತಾಗ ಎದೆ ನಡುಗಲಾರಂಭಿಸಿತು. ಏಕೆಂದರೆ ತನ್ನ ಸಾಧನೆಗೋಸ್ಕರ ಅಂದವಾದ ಮೆಟ್ಟಿಲುಗಳನ್ನು ಕಟ್ಟಿ ಅದರಲ್ಲಿ ಕೂರಬೇಕೆಂಬ ರಾಯರ ಆಸೆ ಪೋಲಿಸ್ ಸ್ಟೇಷನ್ ತನಕ ಹತ್ತಿತೆಂದರೆ ಅದು ವಿಪರ್ಯಾಸವೇ ಆಗಿತ್ತು.

ಅಂತೂ ಕೊನೆಗೆ ಕೇಸಿನಲ್ಲಿ ಅಪಾರ ಗೌರವ, ಅಭಿಮಾನಗಳನ್ನು ಹಾಳುಮಾಡಿಕೊಂಡ ರಾಯರು ಒಂದಿಷ್ಟು ಪರಿಹಾರವನ್ನು ರಮೇಶನ ಕುಟುಂಬಕ್ಕೆ ಕೊಡಬೇಕಾಯಿತು. ಆದರೆ ಆ ಮೆಟ್ಟಿಲುಗಳೇ ರಾಯರಿಗೆ ಈಗ ಬೇಡವಾಗಿತ್ತು. ಇಷ್ಟಕ್ಕೆಲ್ಲಾ ಕಾರಣ ಆ ಮೆಟ್ಟಿಲುಗಳಲ್ಲಿ ಸಾರ್ವಜನಿಕರನ್ನು ರಾಯರು ಬಲವಾಗಿ ನಿರಾಕರಿಸಿದ್ದೇ ಆಗಿತ್ತು! ಹಾಗೂ ಬಲಾತ್ಕಾರವಾಗಿ ಅನೇಕ ಮಂದಿ ರಾಯರ ಆಸ್ತಿ ಪಾಸ್ತಿಗಳನ್ನು ಲೂಟಿ ಮಾಡಲು ಈ ಮೆಟ್ಟಿಲುಗಳೇ ಕಾರಣವಾಗಿದ್ದವು! ಸೂಕ್ಷ್ಮ ಮತ್ತು ಸಣ್ಣ ಕಾರಣವೊಂದು ಮೆಟ್ಟಿಲುಗಳ ಮುಖಾಂತರ ರಾಯರ ಜೀವನದ ಸೋಪಾನವನ್ನೇ ಅಲುಗಾಡಿಸಿ, ತನ್ನ 'ಸ್ಪಂದನ'ದ ಹೆಜ್ಜೆಗಳನ್ನು ಹೊರಜಗತ್ತಿಗೇ ನೀಡಿತ್ತು!

15. ಇದು ಸೂಕ್ತವೇ..........?

– ಗೋಪಾಲಕೃಷ್ಣ ಐ.

ಶೈಕ್ಷಣಿಕ ಕ್ಷೇತ್ರದ ಶಿಕ್ಷಕರು ಹಾಗೂ ಅಧಿಕಾರಿಗಳಿಗೆ ತರಬೇತಿ ನೀಡುವ ಕೇಂದ್ರಕ್ಕೆ ಹೋದಾಗ ಭೇಟಿಯಾಗಿ ನನಗೆ ಪರಿಚಯವಾದದ್ದು ಶಶಿ. ಈತ ತರಬೇತಿ ಕೇಂದ್ರದಲ್ಲಿ ಅಡುಗೆ ಮಾಡುತ್ತಿದ್ದ. ಈತನ ಮಾವ ಶ್ರೀಕಂಠು. ಮಾವ ಮತ್ತು ಅಳಿಯನದ್ದು ಅಡುಗೆಯಲ್ಲಿ ಭಲೇ ಜೋಡಿ. ಬಹಳ ಅನ್ಯೋನ್ಯತೆಯಿಂದ ಅಡುಗೆ ಕಾರ್ಯನಿರ್ವಹಿಸುತ್ತಿದ್ದರು. ತರಬೇತಿಗೆ ಬರುವ 30 ರಿಂದ 35 ಶಿಬಿರಾರ್ಥಿಗಳು ಅರ್ಥಿಕ ಹಾಗೂ ಸಾಮಾಜಿಕ ಹಿನ್ನೆಲೆಯಿಂದ ಬಂದವರು. ಇವರ ಊಟೋಪಚಾರದ ಬೇಡಿಕೆ ಒಬ್ಬರಿಂದ ಇನ್ನೊಬ್ಬರದ್ದು ವಿಭಿನ್ನವಾಗಿತ್ತು. ಈ ಸಂದರ್ಭದಲ್ಲೂ ಅವರಿಗೆ ಊಟ, ಚಹಾ ತಿಂಡಿಗಳ ಹಲವು ಬೇಡಿಕೆಗಳನ್ನು ಕಾಲಕಾಲಕ್ಕೆ ಸಮರ್ಥವಾಗಿ ಪೂರೈಸಿ ಸೈ ಎನಿಸಿಕೊಂಡವರು. ಸ್ವಾದಿಷ್ಟ ರುಚಿಯನ್ನು ಅಡುಗೆಯನ್ನು ತಯಾರಿಸಿ, ಶುಚಿಯಾಗಿ ಬಳಸುತ್ತಿದ್ದರು. ಅಡುಗೆ ಕೋಣೆಯಲ್ಲೂ ಉತ್ತಮ ಶುಚಿತ್ವ ನಿರ್ವಹಣೆ ಮಾಡಿಕೊಂಡು ಬರುತ್ತಿದ್ದರು. ತರಬೇತಿಯಲ್ಲಿ ಆದ ನಮ್ಮ ಪರಿಚಯ ಹಾಗೆಯೇ ಮುಂದುವರಿದಿತ್ತು. ಇತ್ತೀಚಿನ ಮೂರು ತಿಂಗಳಲ್ಲಿ ತರಬೇತಿಗೆ ಹೋಗದ ಕಾರಣ ಇವನ ಭೇಟಿ ಅಪರೂಪವಾಗಿತ್ತು. ಆಗೊಮ್ಮೆ ಈಗೊಮ್ಮೆ ಮೊಬೈಲ್‌ನಲ್ಲಿ ಉಭಯ ಕುಶಲೋಪರಿ ಮಾತನಾಡುತ್ತಿದ್ದನು.

ಸುಮಾರು ಎರಡು ವಾರಗಳ ಹಿಂದೆ ರಾತ್ರಿ 10.30 ಕ್ಕೆ ಅನಿರೀಕ್ಷಿತ ಮೊಬೈಲ್ ಕರೆ ಬಂದಿತ್ತು. ಶಶಿಯ ಧ್ವನಿ ಮಾಮೂಲಿನಂತಿರಲಿಲ್ಲ. ತುಂಬಾ ಉದ್ವೇಗದಿಂದ ಮಾತಾನಾಡುತ್ತಿದ್ದನು. ತರಬೇತಿಯ ದಿನಗಳು ತುಂಬಾ ಕಡಿಮೆ ಆಗಿದೆ. ಸರಿಯಾದ ಸಮಯಕ್ಕೆ ಸಂಬಳ ಸಿಗುತ್ತಿಲ್ಲ. ಹಾಗಾಗಿ ಈ ಕೇಂದ್ರದ ಕೆಲಸವನ್ನು ಬಿಟ್ಟಿದ್ದೇನೆ. ಸದ್ಯಕ್ಕೆ ನಿರುದ್ಯೋಗಿ ಹಾಗೂ ಸಂಸಾರ ನಡೆಸುವುದು ಕಷ್ಟವಾಗುತ್ತಿದೆ. ತುರ್ತಾಗಿ ನನಗೆ ಕೆಲಸದ ಅವಶ್ಯಕತೆಯಿದೆ. ತಕ್ಷಣವೇ ಎಲ್ಲಾದರೂ ಕೆಲಸ ಕೊಡಿಸಿ ಎಂದು ವಿನಂತಿಸಿದ. ಸ್ವಲ್ಪ ದಿನ ಸಮಯಾವಕಾಶ ಕೊಡು, ಪ್ರಯತ್ನ ಪಡುತ್ತೇನೆ ಎಂದು ತಿಳಿಸಿದೆ. ದಿನಾಲೂ ಮೊಬೈಲ್ ಪೋನ್ ಮೂಲಕ ಸಂಪರ್ಕದಲ್ಲಿದ್ದ. "ಯಾರು ತೊಂದರೆಯಲ್ಲಿರುತ್ತಾರೋ, ಸಹಾಯದ ಆವಶ್ಯಕತೆಯಿರುತ್ತೋ ಅಂತಹವರಿಗೆ ಯಾವುದೇ ಪ್ರತಿಲಾಪೇಕ್ಷೆಯಿಲ್ಲದೆ ಸಹಾಯ ಮಾಡು ಇದು ನಿನ್ನನ್ನು ಯಾವಾಗಲೂ ಕಾಪಾಡುತ್ತದೆ" ಎಂದು ಬಾಲ್ಯದಲ್ಲಿ ನನ್ನ ತಂದೆ ಆಗಾಗ ಹೇಳುತ್ತಿದ್ದ ಮಾತು ಮತ್ತೊಮ್ಮೆ ಮಾರ್ಧನಿಸಿತು. ಶಶಿಗೆ ಕಷ್ಟವಿದೆಯಲ್ಲ, ಇದಕ್ಕೇನಾದರೂ ನನ್ನಿಂದ ಆಗುವ ನೆರವು ನೀಡೋಣವೆಂದು ಒಂದಷ್ಟು ಸ್ನೇಹಿತರಿಗೆ ಮತ್ತು ಆತ್ಮೀಯರಿಗೆ ವಿಷಯ ತಿಳಿಸಿದ್ದೆ.

ನನ್ನ ಕುಟುಂಬಕ್ಕೆ ಆತ್ಮೀಯರಾದ ಶ್ರೀಭಟ್ಟರು ಕೋಲಾರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಕೈವಾರದಲ್ಲಿ ಸಾತ್ವಿಕ ಫುಡ್ಸ್ ಎಂಬ ಆಹಾರ ಸಂಸ್ಕರಣಾ ಘಟಕವನ್ನು ಇತ್ತೀಚಿಗೆ ಪ್ರಾರಂಭಿಸಿದ್ದರು. ಸುಮಾರು 32 ಉದ್ಯೋಗಿಗಳಿರುವ ಪುಟ್ಟ ಕಂಪೆನಿ. ಈ ಕಂಪೆನಿ ಸೌತೆಕಾಯಿ ಮತ್ತು ಮಾವಿನ ಹಣ್ಣನ್ನು ಸಂಸ್ಕರಿಸಿ ವಿದೇಶಗಳಿಗೆ ರಫ್ತು ಮಾಡುತ್ತಿತ್ತು. ಈ ಕಂಪೆನಿಯಲ್ಲಿ ಬೆಳಗ್ಗೆ ಹಾಗೂ ಸಾಯಂಕಾಲ ಚಹಾ ಮತ್ತು ಮಧ್ಯಾಹ್ನದ ಊಟದ ವ್ಯವಸ್ಥೆಗೆ ಮಾಡಲು ನಂಬಿಗಸ್ಥ ಸಿಬ್ಬಂದಿಯ ಆವಶ್ಯಕತೆಯಿತ್ತು. ಕಂಪೆನಿಯ ಅವಶ್ಯಕತೆ ಮತ್ತು ಶಶಿಯ ಬೇಡಿಕೆ ಎರಡಕ್ಕೂ ಸಾಮ್ಯತೆ ಇದೆ ಎಂದು ಅರಿತ ನಾನು ಇವರ ಬೇಟಿಗೆ ದಿನಾಂಕ ನಿಗದಿ ಮಾಡಿ, ಸಂದರ್ಶನಕ್ಕೆ ವ್ಯವಸ್ಥೆ ಮಾಡಿದೆ. ಕಂಪೆನಿಯ ಮಾಲಕರ ದೂರವಾಣಿಯನ್ನು ಹಾಗೂ ವಿಳಾಸವನ್ನು ನೀಡಿ, ಮೌಖಿಕ ಸಂದರ್ಶನಕ್ಕೆ ಹಾಜರಾಗುವಂತೆ ಸೂಚಿಸಿದೆ. ನನಗಿಷ್ಟವಾದ ವಿಷಯವೆಂದರೆ ಪ್ರತಿಯೊಂದು ಹಂತದಲ್ಲೂ ಮೊಬೈಲ್ ಮೂಲಕ ಪ್ರತಿಯೊಂದು ಮಾಹಿತಿಯನ್ನು ತಿಳಿಸುತಿದ್ದ ಹಾಗೂ ಸಂದರ್ಶನಕ್ಕೆ ಹೋಗುವ ವಿಷಯವನ್ನು ಸಹಾ ಕಂಪೆನಿ ಮಾಲಿಕರ ಚೇಂಬರ್‌ಗೆ ಹೋಗುವ ಮೊದಲು ವಿಷಯ ಹೇಳಿದ. "ಆಲ್ ದಿ ಬೆಸ್ಟ್" ಎಂದು ಶುಭ ಹಾರೈಸಿ ಸಂದರ್ಶನಕ್ಕೆ ಕಳುಹಿಸಿದೆ.

ಸಂದರ್ಶನದ ನಂತರ ಕಂಪೆನಿ ಮಾಲಿಕರಿಗೆ ಶಶಿಯ ಕ್ರಿಯಾಶೀಲತೆ, ಪಾದರಸದ ಚಲನೆ ಮತ್ತು ಕೆಲಸದಲ್ಲಿ ಆಸಕ್ತಿ ಇಷ್ಟವಾಯಿತು. ಇವನನ್ನು ಆಯ್ಕೆ ಮಾಡಿದ್ದರು. ಈತನ ಕಷ್ಟಗಳಿಗೆ ಸ್ಪಂದಿಸಿ, ನಿರೀಕ್ಷೆಗೂ ಮೀರಿದ ವೇತನವನ್ನು ನಿಗದಿ ಮಾಡಿದ್ದರು. ಇವನ ಹುಟ್ಟೂರು ತಮಿಳನಾಡು ಪಕ್ಕದ ಹೊಸೂರು ಎಂದದ್ದಕ್ಕೆ ವಾಸ್ತವ್ಯಕ್ಕೆ ಅನುಕೂಲವಾಗಲಿ ಎಂದು ಒಂದು ಪುಟ್ಟ ಕೊಠಡಿಯನ್ನು ನೀಡಿದರು. ಮಾಡುವುದಕ್ಕೆ ಕೆಲಸ, ಉಳಿದುಕೊಳ್ಳಲಿಕ್ಕೆ ಕೊಠಡಿ, ನಿರೀಕ್ಷೆಗೂ ಮೀರಿದ ಸಂಬಳ ಮತ್ತು ಕೆಲಸ ಬೇಕೇಂಬ ಅನಿವಾರ್ಯತೆಯಿರುವುದರಿಂದ ನಾಳೆಯೇ ಬಂದು ಕೆಲಸಕ್ಕೆ ಸೇರುತ್ತೇನೆ ಎಂದು ಶಶಿ ತಿಳಿಸಿದ. ಇದೆಲ್ಲವನ್ನೂ ತುಂಬಾ ಅಭಿಮಾನದಿಂದ ಕಂಪೆನಿಯ ಮಾಲಿಕರಾದ ಭಟ್ಟರು ನನಗೆ ತಿಳಿಸಿದರು. ಓರ್ವ ಅಸಹಾಯಕನಿಗೆ ಸಹಾಯ ಮಾಡಿದ ಹಾಗೂ ಒಂದು ಸಂಸಾರ ನಡೆಸಲು ಸೂಕ್ತ ವ್ಯವಸ್ಥೆ ಮಾಡಿದೆನಲ್ಲ ಎಂದು ನನಗೆ ತುಂಬಾ ಸಂತೋಷ ಹಾಗೂ ತೃಪ್ತಿಯಾಯಿತು.

ಶಶಿ ಮರುದಿನ ಕೆಲಸಕ್ಕೆ ಹಾಜರಾಗಲೇ ಇಲ್ಲ. ನಾಳೆ ಬರುತ್ತೇನೆ ಎಂಬ ಭರವಸೆಯ ಮಾತುಗಳು ಈಡೇರಲೇ ಇಲ್ಲ. ಮೊಬೈಲ್ ಫೋನ್ ಮೂಲಕ ಸಂಪರ್ಕ ಮಾಡಿದರೆ ಅತ್ತ ಕಡೆಯಿಂದ ಉತ್ತರವೇ ಇಲ್ಲ ಎಂದು ಕಂಪೆನಿಯ ಮಾಲಿಕರು ತಿಳಿಸಿದರು. ಏನಾದರೂ ಆಗಲಿ ನಾನೊಂದಷ್ಟು ಬಾರಿ ಸಂಪರ್ಕಿಸಲು ಪ್ರಯತ್ನಿಸಿದೆ... ಹಾಗೂ ಪ್ರಯತ್ನಿಸುತ್ತಲೇ ಇದ್ದೆ... ಹೀಗಿರುವಾಗ ಇವನ ಸ್ನೇಹಿತ ಸಂಪರ್ಕಕ್ಕೆ ಬಂದ ಹಾಗೂ ನಿಮ್ಮನ್ನು ಸಂಪರ್ಕಿಸಲು ಹೇಳುತ್ತೇನೆ. ಮುಂದೆ ಸಂಪರ್ಕಿಸಬಹುದು ಎಂದು ಎರಡು ದಿನ ಕಾದೆ...ಆದರೆ ಅವನು ಸಂಪರ್ಕಿಸಲೇ ಇಲ್ಲ.

ಜೀವನದಲ್ಲಿ ಪ್ರತಿಯೊಬ್ಬರಿಗೂ ಕಷ್ಟ ಸುಖ ಬರುತ್ತವೆ ಹೋಗುತ್ತವೆ. ಕಠಿಣ ಸಮಯದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಬೇಕು. ತಮ್ಮ ಕೆಲಸವಾಗುವ ತನಕ ನೀವೆ ದೇವರು ಎಂದವರು ಕೆಲಸವಾದ ನಂತರ ಮರೆಯವುದು ಸೂಕ್ತವೇ? ಅಥವಾ ಹಾಗೆ ನಾವು ನಿರೀಕ್ಷಿಸಬಾರದೇ? ಹೀಗಾದರೆ ನಂಬಿಕೆ ಉಳೀದೀತೆ?....

16. ಎರಡು ತಲೆಯ ಬೆಕ್ಕು

– **ರಾಮಕೃಷ್ಣ**

ಅಮ್ಮ ಹಾಕಿದ, ತಿಂದು ಮುಗಿಸಿದಂತೆ ಮತ್ತೆಮತ್ತೆ ಹಾಕಿದ, ದೋಸೆಯ ಚೂರುಗಳು ಖಾಲಿಯಾದಂತೆ ನನಗೆ ನಿದ್ದೆ ಒತ್ತೊತ್ತಿ ಬಂತು. ದೋಸೆ ಹುಯ್ಯುತ್ತಿದ್ದ ಅಮ್ಮನ ಸೀರೆ ತಾಗುವಂತೆ ಅವರ ಕಾಲಬುಡದಲ್ಲಿ ತಾಗಿಯೆ ಮುರುಟಿದೆ. ಅವರು ಅತ್ತಿತ್ತ ಸರಿದಂತೆ ಅವರ ಸೀರೆಯ ಅಂಚು ನನ್ನನ್ನು ತೀಡುವುದು ಹಿತವಾಗುತ್ತಿತ್ತು. ಆಗಾಗ ನನ್ನ ಬಾಲವನ್ನು ಸೆಟೆದು ಬಾಗಿಸಿ ಅವರ ಪಾದವನ್ನು ನಾನೂ ತೀಡಿದೆ. 'ಎಷ್ಟು ಪ್ರೀತಿಯೆ ನಿನಗೆ' ಎಂದು ಬಾಗಿ ನನ್ನ ಕಿವಿಯನ್ನು ಉಜ್ಜಿದರು. 'ನಾವೆ ಬೆಳೆದುದನ್ನು ಉಂಡರೆ ನಿದ್ದೆ ಚೆನ್ನಾಗುವುದು, ಮನಸ್ಸಲ್ಲಿ ಪ್ರೀತಿಯೂ ಜಾಸ್ತಿ' ಅಂತೇನೋ ಅಂದರು. ಇನ್ನೊಮ್ಮೆ ಕಣ್ಣುಗಳು ಮುಚ್ಚುವಂತೆ ತೀಡಿ, 'ಮಲಗು ಮಲಗು' ಅಂದರು. ಸಮಯ ಸರಿಯುವುದು ನನಗೆ ಗೊತ್ತಾಗಲಿಲ್ಲ. ಆದರೆ ಮಧ್ಯೆಮಧ್ಯೆ ಅದು ಇದು ಮಾತುಗಳು ನನ್ನ ಕಿವಿಯ ಆಲೆಗೆ ತಾಗುತ್ತಲೆ ಇದ್ದವು.

ಒಂದು ಸಲ ಅಮ್ಮ ಕಮ್ಯುನಿಷ್ಟ್ ಮಾವನಿಗೆ ಹೇಳುತ್ತಿದ್ದರು, 'ಅಯ್ಯೋ, ನಿಮ್ಮ ತಿಂಡಿ ಮಧ್ಯೆ ಈ ಬೆಕ್ಕು ಮಾಡಿಟ್ಟ ಕರ್ಮವನ್ನು ಎತ್ತಿ ಆಡಿದೆ, ಊಟದ ಮಧ್ಯೆ ಅಂತದ್ದೆಲ್ಲ ಮಾತಾಡಬಾರದು.' ಅಂತ. ಇನ್ನೊಮ್ಮೆ ಕಿವಿಗೆ ಬಿತ್ತು, 'ಅಯ್ಯೋ, ಈ ಹೇಲುಚ್ಚೆಯಷ್ಟು ಬೇಗನೆ ಭೂಮಿಗೆ ಸೇರೋದು ಯಾವುದಿದೆ. ಭೂಮಿ ಸೇರದೆ ಉಳಿಯುವ ಯಾವುದಿದ್ದರೂ ಭೂಮಿಯನ್ನು ಮುಳುಗಿಸಿ ನರಕವಾಗಿಸದೆ ಇರದು.' ಅಂತ. ಏನೇನೋ ಮಾತು. ಒಂದೊಂದು ಮಾತಿಗೂ ಪ್ರೀತಿಯ ಅಲೆಯೊಂದು ನನ್ನನ್ನು ಸಾವರಿಸಿದಂತೆ ಆಗುತ್ತಿತ್ತು. ಮತ್ತೆ ನನ್ನ ತಮ್ಮನನ್ನು ಕೀಳೈಸುವಂತಾದ್ದು ಯಾವದೂ ಬರದಿರಲಿ ಎಂದುಕೊಳ್ಳುತ್ತಾ ಜೊಂಪು ಕೊಡವಿಕೊಳ್ಳದೆ ಉಳಿದೆ.

ಎಷ್ಟೋ ಹೊತ್ತಾಗಿರಬೇಕು. ಅಮ್ಮನ ಸರಬರ, ತಟ್ಟೆ ಲೋಟ ಪಾತ್ರಗಳ ಕಿಣಿಕಿಣಿ ಅವರು ಒಂದೊಂದೆ ಕೆಲಸಕ್ಕೆ ಕೈಹಚ್ಚಿ ಮುಗಿಸುತ್ತಿದ್ದುದನ್ನು ಹೇಳುತ್ತಿತ್ತು. ಒಮ್ಮೆಲೆ ಗಡ್ಡದ ಅಪ್ಪ, 'ಎಲ್ಲಿದ್ದೀ, ಇಲ್ಲೊಂದು ವಿಶೇಷ ನೋಡು' ಅಂತ ಅಮ್ಮನ್ನ ಕರೆದರು. ಕುತೂಹಲ ನನ್ನನ್ನು ಬಡಿದೆಬ್ಬಿಸಿ ಮೈಮುರಿದು ಅಮ್ಮನ ಹಿಂದೆ ನಾನೂ ಬಿದ್ದೆ. ಹೊರಗೆ ಗಡ್ಡದ ಅಪ್ಪ ತದೇಕವಾಗಿ ಬೇವಿನ ಮರವನ್ನೆ ನೋಡುತ್ತಿದ್ದರು. ಇಬ್ಬನಿ ಎಲ್ಲವನ್ನು ಮಂಕಾಗಿಸಿ ಬೇವಿನ ಮರವನ್ನು ಮಾತ್ರ ತನ್ನ ಬಿಳುಪಿನ ಒಳಗೆ ಕೊರೆದಂತೆ ಮೂಡಿಸಿತ್ತು. ಅದರ ಎಲೆಗಳು ನಿಧಾನವಾಗಿ ಉಸಿರು ಆಡುವಷ್ಟು ನೀರವದಲ್ಲಿ ಅಲುಗುತ್ತಿದ್ದವು. ಇಬ್ಬನಿಯನ್ನು ಮೈತುಂಬಿಕೊಂಡ ಗಾಳಿ ಇಬ್ಬನಿಯ ಕಣಕಣವನ್ನು ನೋಡಿಕೊಳ್ಳಿ ಎಂಬಷ್ಟು ನಿಧಾನವಾಗಿ ಬೀಸುತ್ತಿತ್ತು. ಗಾಳಿಯನ್ನು ಇಬ್ಬನಿಯನ್ನು ಮೃದುವಾಗಿ ತೀಡುವಂತೆ ಬೇವಿನ ಮರದ ಎಲೆಗಳ ಚಲನೆಯಿತ್ತು. ಅಂಗಳದಲ್ಲಿ ಗಡ್ಡದ ಅಪ್ಪನಿಗೆ ಆತು ಇದ್ದ ಅಮ್ಮ 'ನೀನೂ ಬಾರೆ' ಅಂತ ನನ್ನನ್ನು ಜಗುಲಿ ಕಟ್ಟೆಯಿಂದ ಎತ್ತಿ ಕರಕೊಂಡರು.

ನಾಯಿಗಳು 'ಬೊಕ್' ಅಂದವು. ಅಮ್ಮ 'ಹ್ಹಾಂ ಹ್ಹಾಂ, ನೀವೂ ನೋಡಿ ಅಂದರು'. ನಾನು ನಾಯಿ ಕಡೆ ಕತ್ತು ತಿರುಗಿಸಿದಾಗ ಅವು ಬೇವಿನ ಮರದ ಬದಲಿಗೆ ರಸ್ತೆ ಕಡೆ ಕಣ್ಣಾಗಿದ್ದವು. ಎರಡು ಕಾಲುಗಳ ಮೇಲೆ ನಿಂತು ಬಾಲವನ್ನು ಜೋರಾಗಿ ಸ್ವಾಗತಿಸುವಂತೆ ತೊನೆಯುತ್ತಿದ್ದವು. ಬಾಲದ ಬೀಸಿನ ಜೋರಿಗೆ ಅವುಗಳ ದೇಹವೂ ಎಡಬಲ ಜೋಲಿ ಹೊಡೆಯುತ್ತಿದ್ದವು. ಕಣ್ಣುಗಳನ್ನು ಸಣ್ಣಗೆ ಮಾಡಿ ರಸ್ತೆಕಡೆ ಏನನ್ನೋ ಕಾಣುವುದಕ್ಕೆ ತವಕಿಸುತ್ತಿದ್ದವು. ಸಣ್ಣ ಸಿಳ್ಳೆಯೊಂದು ಗಾಳಿಯಲ್ಲಿ ತೇಲಿಬಂತು. ನಾಯಿಗಳು ಮತ್ತೆ ಬಲವಾಗಿ ಬಾಲವಾಡಿಸುತ್ತ ಕುಂಯ್‌ಗುಟ್ಟುವುದಕ್ಕೆ ತೊಡಗಿದವು. ಮತ್ತೆ ದೀರ್ಘವಾಗಿ ಸಿಳ್ಳೆ ತೇಲಿಬಂದಂತೆ ಅಮ್ಮ ಮತ್ತು ಗಡ್ಡದ ಅಪ್ಪ ಇಬ್ಬರಿಗೂ ಕಿವಿನಿಮಿರಿದಂತಾಗಿ, 'ಹ್ಞಂ' ಅನ್ನುತ್ತ ರಸ್ತೆ ಕಡೆ ತಾವೂ ಮುಖವಾದರು. ಇಬ್ಬನಿಯೊಳಗಿಂದ ಆಕೃತಿಯೊಂದು ಮೂಡಿ ಬರುತ್ತಿತ್ತು. ನಾಯಿಗಳು ನೆಗೆಯುವದೂ, ಪ್ರೀತಿಗೆ ಬಾಯಿಯ ಜೊಲ್ಲು

ಹರಿಯುವುದೂ ಸುರುವಾಯಿತು. ಅಮ್ಮ ಮತ್ತು ಗಡ್ಡದ ಅಪ್ಪ ಇಬ್ಬರೂ ಬೇವಿನ ಮರದಂತೆ ನಿಶ್ಚಲವಿದ್ದರೂ ಬರುತ್ತಿರುವವರ ಗುರುತಾಗಿದೆ ಎಂಬಂತೆ ಬೇವಿನ ಎಲೆ ಅಲುಗಿದ ರೀತಿಯಲ್ಲೆ ಮೆಲುನಗುವಾದರು.

ಹತ್ತಿರಹತ್ತಿರ ಬಂದ ಆ ಆಕೃತಿ ಹುಡುಗಿಗಿಂತ ದೊಡ್ಡವಳಾಗಿ ಯುವತಿಗಿಂತ ಕಮ್ಮಿಯವಳಾಗಿ ಅಮ್ಮನ ಹಾಗೆ ಸ್ಥೂಲವಿಲ್ಲದಿದ್ದರೂ ತದ್ರೂಪವಾಗಿದ್ದಳು. ಇವಳೆ ಮಗಳು ಅಂತ ನನಗೆ ಖಚಿತವಾಯಿತು. ಗಡ್ಡದ ಅಪ್ಪ ಒಮ್ಮೆಗೆ, 'ಏನೇ, ನೀನೂ ಒಂದು ಬೆಕ್ಕಿನ ಮರಿ ತಂದಿದ್ದೀಯಾ?' ಅಂದರು. ನನಗೆ ಒಮ್ಮೆಗೆ ಮೈಯೆಲ್ಲ ರಕ್ತನುಗ್ಗಿ ದಿಗಿಲು ಹತ್ತಿತು. ನೋಡಿದೆ, ಗಡ್ಡದ ಅಪ್ಪ ಆಕೆಯ ಹೆಗಲ ಮೇಲೆ ಗೊಂಡೆಯಾಗಿ ಕೂರಿಸಿದ್ದ ಜಡೆಯ ತುದಿಯನ್ನು ಕೈಯಲ್ಲಿ ಎತ್ತಿ ಹಿಡಿದು 'ಕರಿಕಪ್ಪು ಬೆಕ್ಕಿನ ಮರಿ' ಎಂದು ಅದನ್ನು ಮೂಸಿದರು. ನಾನು ಸರಿಯಾಗಿ ನೋಡಿದೆ. ಗುಂಗುರುಗುಂಗುರಾಗಿದ್ದ ತಲೆಕೂದಲನ್ನು ಬಲಾತ್ಕಾರವಾಗಿ ಒತ್ತಿ ಬಾಚಿ ಜಡೆ ಹೆಣೆದು ಅದರ ತುದಿಯನ್ನು ಮುಖದಂತೆ ಅಗಲವಾಗಿ ಹರಡಿ ಹೆಗಲ ಮೇಲೆ ಕೂರುವಂತೆ ಬಿಟ್ಟುಕೊಂಡಿದ್ದಳು. ಗುಂಗುರಿನ ಅಲೆಯಲ್ಲಿ ಇಬ್ಬನಿ ಹನಿಹನಿ ಕೂತು ನನ್ನ ಮೈಮೇಲಿನ ಬೂದು ಕಪ್ಪು ಪಟ್ಟೆಯಂತೆ ಕಾಣುತ್ತಿತ್ತು. ಅದು ಹೆಗಲ ಮೇಲೆ ಕೂರಿಸಿಕೊಂಡ ಬೆಕ್ಕಿನಂತೆ ಗಡ್ಡದ ಅಪ್ಪನಿಗೆ ಕಂಡಿದ್ದು ಸರಿಯಾಗಿತ್ತು. 'ಬಾರೆ ನನ್ನ ಎರಡು ತಲೆಯ ಬೆಕ್ಕೆ' ಅಂತ ಗಡ್ಡದ ಅಪ್ಪ ಮಗಳನ್ನೆ ಬೆಕ್ಕು ಮಾಡಿಕೊಂಡು ಭಾವದಲ್ಲಿ ಬರಸೆಳೆದರು. ಗಡ್ಡದ ಅಪ್ಪ ಒಂದು ಕೈಯಲ್ಲಿ ಜಡೆ ತುದಿಯ ಗೊಂಡೆಯನ್ನು ಸುರಕ್ಷಿತವಾಗಿ ನೋಯದಂತೆ ಎತ್ತಿಕೊಂಡಂತೆ ಹಿಡಿದಿದ್ದರು. ಅಮ್ಮನೂ ಆ ವೃತ್ತದಲ್ಲಿ ಸೇರಿಕೊಂಡಾಗ ಅಪ್ಪ ಅಮ್ಮ ಮತ್ತು ಮಗಳ ತಲೆಗಳು ಒಂದೆ ಎಂಬಂತಾಯ್ತು. ನನಗೆ ಅವರ ಜೀವದ ಗೂಡಲ್ಲಿ ತಾವು ಸಿಕ್ಕಿತು.

ಮಗಳು ಮತ್ತೆ ನಾಯಿಗಳನ್ನು ವಿಚಾರಿಸುವುದಕ್ಕೆ ಹೋದಳು. ಅವು ಕಾಲಮೇಲೆ ನಿಂತು ಅವಳ ಎದೆವರೆಗೂ ಕೈಚಾಚಿ ತವಕಿಸಿ ಮುಖ ಚಾಚಿದವು. ಅಮ್ಮ, 'ನೋಡೆ, ಕಮ್ಯೂನಿಷ್ಟ್ ಮಾವ ಬಂದಿದ್ದಾರೆ, ಮೊದಲು ಮಾತಾಡಿಸು' ಅಂದರು.

ಗಡ್ಡದ ಅಪ್ಪ, 'ನಾನೊಂದು ಕಥೆ ಬರೆದಿದ್ದೇನೆ. ಮೊದಲು ತಿಂಡಿಯೋ ಕಥೆಯೋ ಎಂದು ಕೇಳಿದರು'. 'ಕಥೆಯೇ, ನೋಡುತ್ತೇನೆ ಅದು ಬೆಕ್ಕಿಂದೆ ಇಲ್ಲ ಬೆಣ್ಣೆ ಹಣ್ಣಿಂದೆ ಅಂತ. ಆದರೆ ನಾನು ಮೊದಲು ಮಾವನನ್ನೂ ಅಜ್ಜಿಯನ್ನೂ ಮಾತಾಡಿಸಬೇಕು' ಎಂದು ಮನೆಯ ಒಳಹೊಕ್ಕಳು. ಗಡ್ಡದ ಅಪ್ಪನೂ ಒಳಹೊಕ್ಕು ಹುಡುಕಿ ತಾವು ಬರೆದ ಕಥೆಯ ಪೇಪರು ತಂದು ಜಗಲಿಯ ಕಟ್ಟೆಯಲ್ಲಿ ಕೂತಾಗ ಅಮ್ಮ ನನ್ನನ್ನು ಪಕ್ಕವೆ ಇಳಿಸಿ ತಾವೂ ಕೂತರು.

ಒಳಗಿಂದ ಕಮ್ಯೂನಿಷ್ಟ್ ಮಾವ, 'ನೋಡೆ, ನಿನ್ನಮ್ಮ ನಮ್ಮ ಕಮ್ಯೂನಿಸಮ್ಮನ್ನ ಬುರ್ನಾಸು ಮಾಡಿ ಬಿಟ್ಟರು. ನಿನ್ನತ್ರ ಹೇಳಿ ಚರ್ಚಿಸೋದಿಕ್ಕೆ ತುಂಬಾ ಇದೆ. ಯಾವಾಗ ಮಾತೋಡೋದು' ಅಂತ ಅವಳ ಉಪಾಹಾರ ಎಲ್ಲಾ ಮುಗೀಲಿ ಅನ್ನುವ ಇಂಗಿತದಲ್ಲಿ ಹೇಳಿದರು. ಅದಾಗಿ 'ಅಜ್ಜೀ' ಅಂತ ಅಕ್ಕರಿಸಿ ಅವರ ಕೈಹಿಡಿದು ಮಾವನ ಸಹಿತ ಜಗಲಿಗೆ ಬಂದು ಕೂತಳು. ನಾನು ಕುಕ್ಕುರಾಗಿ ಕೂತು ಬಾಲವನ್ನು ನೆಲದ ಮೇಲೆ ತಿರುವುತ್ತ ಕೈಗಳಿಂದ ಮುಖ ಉಜ್ಜುತ್ತಿರಬೇಕಾದರೆ ಗಡ್ಡದ ಅಪ್ಪನ ಮಗಳು ನನ್ನನ್ನು ಎತ್ತಿ ತನ್ನ ಮಡಿಲಿಗೆ ಹಾಕಿಕೊಂಡು ನನ್ನ ಕಣ್ಣಿನ ಹಿಕ್ಕೆಯನ್ನು ಒರೆಸಿದಳು. ಗಡ್ಡದ ಅಪ್ಪ ತಮ್ಮ ಕಥೆಯನ್ನು ಓದುವುದಕ್ಕೆ ಪ್ರಾರಂಭಿಸಿದರು.

ಕಥೆಯಲ್ಲಿ ಯಾರಿಗು ಅಷ್ಟಾಗಿ ಆಸಕ್ತಿಯಾದಂತೆ ಕಾಣಲಿಲ್ಲ. ಅದರಲ್ಲಿ ಬಂದ ಪಾತ್ರಗಳು ಗೊತ್ತಿರುವವರೆ ಆಗಿದ್ದರು. ಯಾರಿಗು ಏನೇನು ವಿಶೇಷ ಅನಿಸಲಿಲ್ಲ. ಆಗ ಅಜ್ಜಿಯ ಪಾತ್ರ ಬಂತು. ಅಜ್ಜಿ ಹೆದರಿಕೆ ಪುಕ್ಕಿ, ಅಜ್ಜಿ ಜುಗ್ಗಿ, ಅಂತೆಲ್ಲ ಬರುತ್ತಲೆ ಗಡ್ಡದ ಅಪ್ಪನ ಮಗಳು ಒಮ್ಮೆಗೆ ಎದ್ದು ನಡೆದು ಕಥೆಯ ಕಾಗದಗಳನ್ನು ಪುಸ್ಸಂತ ಕಿತ್ತು ಹಿಡಿದು 'ಅಪ್ಪಾ, ನೀವು ಕಥೆ ಬರೆಯುವುದು ಬೇಡ. ಅಜ್ಜಿ ನಿಮ್ಮ ಕಥೆಗೆ ಪಾತ್ರವಾಗುವುದಕ್ಕೆ ಇರುವವರಲ್ಲ. ಜೀವನದಲ್ಲಿ ಯಾರುಯಾರೋ ಹೇಗೆಹೇಗೋ ಇರುತ್ತಾರೆ. ಹಾಗಂತ ಗೊತ್ತಿರುವವರ ಬಗ್ಗೆ ನಾಕು ಸಾಲು ಬರೆದುದೆ ಕಥೆಯಾಗುವುದಾದರೆ ಅದನ್ನು ಯಾರೂ ಓದಬೇಕಿಲ್ಲ, ಕೇಳಬೇಕಿಲ್ಲ' ಅಂದುಬಿಟ್ಟಳು. ಕಾಗದಗಳನ್ನು ಪರ್‍ರಂತ ಹರಿದಳು. ಅವಳೆಷ್ಟು ಗಂಭೀರಳಿದ್ದಳೆಂದರೆ ಗಡ್ಡದ ಅಪ್ಪ ಬೆಪ್ಪಾದರು. ಉಳಿದೆಲ್ಲರೂ ಮುಸಿಮುಸಿ ನಕ್ಕರು.

ನನಗೆ ಜೀವನ ಗಂಭೀರವೋ ಖುಷಿಯೋ ದು:ಖವೋ ತಮಾಷೆಯೋ ಎಂದು ತಲೆಯೊಳಗೆ ಕಲಸಿಕೊಳ್ಳುವುದಕ್ಕೆ ತೊಡಗಿತು. ತಮ್ಮನ ನೆನಪಾಯಿತು. ಪೇಟೆಯ ನನ್ನ ಬಳಗದ ನೆನಪು ಒತ್ತಿಯೊತ್ತಿ ಬಂತು. ಒಳ ನಡೆದೆ. ತಮ್ಮ ತಟ್ಟೆಯಲ್ಲಿ ಹಾಕಿದ್ದ ದೋಸೆಯ ಚೂರೊಳಗೆ ಮುಖ ಹುದುಗಿಸಿ ಉಣ್ಣುತ್ತಿದ್ದ. ನಾನೂ ಚೂರನ್ನು ಬಾಯಿಂದ ಕತ್ತರಿಸಿ ನುಂಗಿದೆ. ಅವನೇನು ಗುಸ್ಸೆನ್ನಲಿಲ್ಲ. ಬದಲಾಗಿ ನನ್ನ ಮೈಗೆ ಒತ್ತರಿಸಿ ಬಂದ. ಅದಾಗಿ ನಾನು ಒಲೆಯ ತಳದಲ್ಲಿ ಮಗ್ಗುಲಾದಂತೆ ಅವನೂ ಬಂದು ಎರಡೂ ಕೈಗಳಿಂದ ನನ್ನನ್ನು ಬಳಸಿ ನನ್ನ ಹೊಟ್ಟೆಗೆ ತಲೆಯಾನಿಸಿ ಮಲಗಿದ. ಸುಖ ದು:ಖ ತಮಾಷೆ ದುಗುಡಗಳ ಲಯ ನನ್ನನ್ನು ನಿದ್ದೆಗೆ ನೂಕಿತು.

17. ಬದ್ಧತೆ

– ರವಿಪ್ರಕಾಶ್

ನನ್ನ ತಂದೆಯವರು ಪ್ರಾಥಮಿಕ ಶಾಲಾ ಮುಖ್ಯ ಗುರುಗಳಾಗಿ ತಮಿಳು ನಾಡಿನ ಗಡಿನಾಡಿನಲ್ಲಿ ಕೆಲಸಮಾಡಿ ನಿವೃತ್ತರಾದವರು. ಹುಟ್ಟೂರು ಗಂಡ್ಲುಪೇಟೆ ಕಡುಬಡತನದಲ್ಲಿ ಹುಟ್ಟಿ ವಾರದ ಅನ್ನದಲ್ಲಿಬೆಳೆದು ಕೆಲಸಕ್ಕೆ ಸೇರಿ ನೆಲಿಸಿದ್ದು ತಾಳವಾಡಿಯ ಚಿಕ್ಕಹಳ್ಳಿ ಎಂಬ ಗ್ರಾಮದಲ್ಲಿ. 1953 ರಲ್ಲಿ ಕೆಲಸಕ್ಕೆ ಸೇರಿದ ಇವರು ಇದೇ ಗ್ರಾಮದಲ್ಲಿ ಶಾಲೆ ಪ್ರಾರಂಭ ಮಾಡಿ ಅಲ್ಲಿನ ಮಕ್ಕಳಿಗೆ ವಿದ್ಯೆನೀಡಿದರು. ಕೆಲಸದಲ್ಲಿ ಕಟ್ಟುನಿಟ್ಟಾಗಿದ್ದ ಇವರಿಗೆ ಇಲಾಖೆಯಲ್ಲಿ ಮತ್ತು ಗ್ರಾಮದಲ್ಲಿ ಒಳ್ಳೆಯ ಹೆಸರು ಗಳಿಸಿದ್ದರು. ನಾನು ನನ್ನ ಪ್ರಾಥಮಿಕ ಶಿಕ್ಷಣವನ್ನು ಅವರಿದ್ದ ಶಾಲೆಯಲ್ಲೆ ಕಲಿತವನು. ಎಲ್ಲ ಮಕ್ಕಳಂತೆ ನನ್ನನ್ನು ಸಹ ಒಂದೇ ಭಾವನೆಯಿಂದ ನೋಡುತ್ತಿದ್ದರು. ಅವರು ನನಗೆ ಜೀವನದಲ್ಲಿ ಕಲಿಸಿದಪಾಠ “ಬಧ್ದತೆ”. ಎಂದು ಅವರು ಸಮಯ ಹಾಳುಮಾಡಿದವರಲ್ಲ ಮತ್ತು ಯಾವ ಸಂಘಟನೆಗಳ ಜೊತೆ ಗುರುತಿಸಿಕೊಂಡವರಲ್ಲ.ತಾವಾಯಿತು ತಮ್ಮ ಕೆಲಸವಾಯಿತು ಎಂದು ಬಾಳಿದವರು. ಅವರಿಗೆ ಬಹಳಜನ ಶಿಷ್ಯಂದಿರು ಅವರೆಲ್ಲರ ಅಚ್ಚು ಮೆಚ್ಚಿನ ಗುರುವಾಗಿದ್ದರು. ಮಿತಭಾಷಿ ಯಾರಜೊತೆ ಎಷ್ಟೋ ಅಷ್ಟೆ.ಎಂದು ಕೆಲಸಕ್ಕೆ ಚಕ್ಕರ್ ಹೊಡೆದವರಲ್ಲ ಮತ್ತು ವಿನಾಕಾರಣ ರಜೆಹಾಕಿ ಕಾಲಕಳೆದವರಲ್ಲ. ನಾನು ಎಸ್.ಎಸ್.ಎಲ್.ಸಿ ಓದುವಾಗ ಬಿದ್ದು ಕೈ ಮುರಿದುಕೊಂಡಿದ್ದೆ ಆಗ ಚಾಮರಾಜನಗರಕ್ಕೆ ಕರೆದುಕೊಂಡು ಹೋಗಲು ರಜೆ ಹಾಕಿದ್ದು ನನಗೆ ನೆನಪಿದೆ.ಅವರು ಆಂಗ್ಲ ಭಾಷೆಯ ತರಗತಿ ತೆಗೆದುಕೊಳ್ಳುತ್ತಿದ್ದರು.1984 ರಲ್ಲಿ ನಿವೃತ್ತಿಹೊಂದಿದರು ಅವರು ನಿವೃತ್ತಿಹೊಂದುವ ದಿನಾಂಕ ಯಾರಿಗು ತಿಳಿಸಿರಲಿಲ್ಲ ಅವರ ಸಹ ಶಿಕ್ಷಕರಿಗು ಸಹ. ಅಂದು ಅವರ ಕೊನೆಯ ಕ್ಲಾಸ್ ಮುಗಿಸಿ ಶಾಲೆ ಬಿಟ್ಟಾಗ ಎಲ್ಲ ಮಕ್ಕಳು ಮತ್ತು ಸಹ ಶಿಕ್ಷಕರನ್ನು ಕರೆದು” ನಾಳೆಯಿಂದ ಶಲೆಗೆ ಬರಲು ನನಗೆ ಅವಕಾಸವಿಲ್ಲ ಎಂದು ಕಣ್ಣೀರಿಟ್ಟದ್ದನ್ನು ಅವರ ಸಹಪಾಟಿಗಳು ಇಂದಿಗುನೆನಪಿಸಿಕೊಳ್ಳುತ್ತಾರೆ. ಇದೆ ಅವರು ನನಗೆ ಕಲಿಸಿದ “ಬಧ್ದತೆಯ” ಪಾಠ. ಕಳೆದ ಮೇ ತಿಂಗಳ 3 ರಂದು ಇಹಲೋಖ ಯಾತ್ರಮುಗಿಸಿದರು. ನನ್ನ ಅಪ್ಪ ಯಾವ ಆಸ್ತಿಯನ್ನು ಮಾಡಲಿಲ್ಲ ಎಂಬ ಕೊರಗಿಲ್ಲ ನನಗೆ. ಸ್ವತಂತ್ತ ಬದುಕನ್ನು ರೂಪಿಸಿಕೊಳ್ಳುವ ಮಾರ್ಗವನ್ನು ಹೇಳದೆ ತೋರಿಸಿಕೊಟ್ಟವರು.

18. Response from the Readers/ ಓದುಗರ ಅನಿಸಿಕೆಗಳು

- A very good Magazine. Thanks for team’s commendable efforts - Gurbachan Singh
- A small but neat issue. Well done - Peri
- It came out very well – Shadakshari

19. How do children learn!

-Atiya Kousar

بسم اللہ الرحمٰن الرحیم

علم کے سیکھنے میں یادداشت کا رول

☆ یادداشت کسے کہتے ہیں، اس کا عمل کس طرح ہوتا ہے؟

☆ یادداشت کو کیسے بڑھائیں؟

ہم اپنی آنکھوں دیکھتے ہیں، کانوں سے سنتے ہیں، جلد سے محسوس کرتے ہیں، اس طرح دباؤ ، جلن اور درد کا تجربہ حاصل کر لیتے ہیں، ناک سے بُو باس سونگھنا، زبان سے چکھنا وغیرہ حواس خمسہ سے حاصل ہونے والی مہارت رگوں کے ذریعہ دماغ میں جمع ہو جاتی ہے۔ وہاں ضرورت پڑنے پر جسمانی عمل کو ایک خاص روپ دینے کی افادیت کا عمل ہی یادداشت کہلاتی ہے۔

مثلاً ایک بچہ آگ سے ہاتھ جلا لینے کے بعد پھر کبھی آگ کے قریب نہیں جاتا بلکہ احتیاط سے رہتا ہے، اور کسی ہوٹل میں ایک مرتبہ مزیدار ناشتہ کرنے کا موقع ملے تو اس کے ذائقہ کو یاد کرتے ہوئے بار بار ہمیں وہیں جانے پر طبعیت اُکساتی ہے اس طرح یادداشت ہمارے سارے حرکت و عمل کو ایک خاص روپ کے ساتھ ہمیں قابو میں رکھتی ہے۔

جانوروں کی بہ نسبت اِنسان فطرت پر قابو پانے کی پوری صلاحیت رکھتا ہے اس نے جو عیش و آرام اور دیگر سہولیات اب تک مُہیا کر لیئے ہیں، اس کا سبب اس کی عمیق یادداشت ہی ہے۔

☆ یادداشت کس طرح عمل پذیر ہوتی ہے

یادداشت علم سیکھنے کے عمل میں بہت اہم رول ادا کرتی ہے، حواس خمسہ اپنے صحت مندانہ عمل کے ذریعۂ احساس و تجربہ کو ٹھیک طور سے اخذ کر کے دماغ تک پہنچاتے ہیں تو دماغ اس کو سمجھ کر اس کی اہمیت کو جان لیتا ہے یہی احساسات و تجربات ذہن کے عارضی ذخیرۂ نظام میں محفوظ ہو جاتے ہیں اور آگے چل کر مستقل ذخیرہ کے نظام میں منتقل ہو جاتے ہیں اس کے بعد کا تجربہ (سیکھنے کے عمل کا اعادہ) ضرورت پڑنے پر انہیں احساسات و تجربات میں تبدیلیاں لا کر انہیں سُدھار، سنوار کر سیکھنے کے عمل کو قوی و مضبوط بنا دیتا ہے اس سے مناسب وقت پر ٹھیک طور سے اِستعمال کرنے کی صلاحیت کو فروغ حاصل ہوتا ہے۔

☆ یادداشت کو کیسے بڑھائیں

ہم کمرۂ جماعت میں تدریس کو زیادہ موثر بنانے کے لئے کئی طرح کے وسائل کا اِستعمال کرتے ہیں تو طلبہ کے تمام حواسِ خمسہ مستعمل رہتے ہیں، وہ دیکھتے ہیں، سُنتے ہیں اور پوچھنے پر جواب بھی دیتے ہیں اس کے باوجود جب ہم دوسرے دن یا کبھی اُن کی معلومات کی جانچ کے لئے یا پڑھائے ہوئے سبق کا امتحان لینے کی خاطر سوالات کرتے ہیں تو طلباء کا ردِ عمل منفی ہوتا ہے بہت کم طالب علم دلچسپی کا اظہار کرتے ہیں۔ اس کی وجہ یہی ہو سکتی ہے کہ طلباء یا تو دلچسپی سے سبق نہیں سیکھ رہے تھے یا فوری طور پر تو سُنا جواب بھی دے دیا مگر انہیں یاد نہیں رکھ پائے۔ ایسا کیوں ہوا؟ اس کے ذمہ دار کون؟ طلباء پڑھایا ہوا سبق اتنی جلد کیوں بھول جاتے ہیں اس کے لئے ہمیں کرنا کیا چاہیئے کیوں کہ ان کی یادداشت کو بڑھا وادیں۔

یادداشت کو بڑھانے کے لئے کوئی دوا تو ہے نہیں، اس کے لئے یکسوی سے مطالعہ کرنا، مطالعہ کے بعد آموختہ کرنا اپنے ہم جماعت ساتھیوں کے ساتھ اس پر بحث کرنا یہی وہ عملی طریقۂ کار ہے جو قوت حافظہ کے اِرتقاء میں معاون و مددگار ہوتا ہے، ان میں طلباء کے مشاہدے ہی کارفرما ہوتے ہیں مشاہدہ جتنا گہرا ہوگا اتنی ہی یادداشت بھی موثر ہوگی۔

طلباء کی یادداشت بڑھانے کے لئے اہم اقدام اُن کا مشاہدہ اور سبق کا آموختہ کرنا ہوتا ہے، سبق میں چُھپے منطق کو وہ اچھی طرح سے سمجھ لیں تو اُن کی یادداشت بہتر نتائج برآمد کر سکتی ہے مثلاً برآمد کر سکتی ہے مثلاً بچوں کو پہاڑے یاد کروانا ہے یا کرنا ہے تو وہ یہ جان لیں کے ایک عدد کا دوسرے سے تعلق بھی ہے جیسے۔

3 x 2 = 6 یا 4 x 2 = 8 یا 2 x 4 = 8 وغیرہ

اور 0 جمع 2 مساوی ہے 2 اور 2 جمع 0 مساوی 2 ہے۔ وغیرہ

اسی طرح کی مشق کو زیادہ سے زیادہ پختہ بنانے کے لئے انہیں زیادہ ہوم ورک دینا چاہیئے۔ تاکہ طلباء اپنے گھر میں اسکول میں سکھایا ہوا سبق یاد کر کے اپنے اپنے طور سے یا اپنے ساتھیوں کی مدد سے ہوم ورک کی تکمیل کر لیں تو پڑھایا ہوا سبق پڑھا ہوا علم ہمیشہ ان کے ذہن میں محفوظ رہیگا۔

19. Cool clicks

Bayalu Coordinators at your place for any query or support;

Bangalore: *Asha Rai – asha.rai@azimpremjifoundation.org*

Yadgir: *Guru Moger – guru.moger@azimpremjifoundation.org*

Mandya: *Gopalakrishna – gopalakrishna@azimpremjifoundation.org*

Gulbarga: Gururaj Nargund – gururaj.nargund@azimpremjifoundation.org

Pls write to us with your feedback to bayalu@azimpremjifoundation.org